Mr. DEPUTY SPEAKER.—I will put Clause 4, as amended to the House. The question is :

"That Clause 4, as amended, do stand part of the Bill."

The motion was adopted.

Clause 4, as amended, was added to the Bill.

Clauses 5 to 9.

Mr. DEPUTY SPEAKER.—The question is :

"That Clauses 5, to 9 both inclusive, do stand part of the Bill."

The motion was adopted.

Clause 5, to 9 both inclusive were added to the Bill.

Clause 1.

Mr. DEPUTY SPEAKER.—The question is :

Clause 1, the Long Title, the Preamble and the Enacting Formula were added to the Bill.

The motion was adopted.

"That Clause 1, Long Title, the Preamble and the Enacting formula were added to the Bill."

Motion to pass.

Sri N. HUTCHAMASTHY GOWDA (Minister for Revenue).—Sir, I move :

"That the Mysore Tenants (Relief in Payment of Arrears of Rent) Bill, 1972, as amended, be passed."

Mr. DEPUTY SPEAKER.—The question is :

"That the Mysore Tenants (Relief in Payment of Arrears of Rent) Bill, 1972 as amended be passed."

The motion was adopted and Bill as amended was passed.

GOVERNMENT GRANTS (MYSORE EXTENSION) BILL, 1972

Motion to consider.

Sri N. HUTCHAMASTHY GOWDA (Minister for Revenue).—I beg to move :

"That the Government Grants (Mysore Extension) Bill, 1972, be taken into consideration."

Mr. DEPUTY SPEAKER.—Motion moved—

"That the Government Grants (Mysore Extension Bill, 1972, be taken into consideration."

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ಕಾನೂನಿನ ಮುಖ್ಯ ಉದ್ದೇಶ ಏನು ಎಂದರೆ ಸರ್ಕಾರದವರು ಜಮೀನುಗಳನ್ನು ಮಂಜೂರು ಮಾಡತಕ್ಕ ಸಂದರ್ಭದಲ್ಲಿ ಪ್ರಚಾರೆ ಮಾಡಬಾರದು ಎಂದು ಒಂದು ಷರತ್ತನ್ನು ಹಾಕತಕ್ಕ ಪದ್ಧತಿ ಇತ್ತು. ಷರತ್ತನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಸಾಧ್ಯವೇ ಎನ್ನುವುದು ಅನುಮಾನ ಉಂಟಾಗಿ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಪ್ರಕಾರವಾಗಿ ಇಂತಹ ಶರತ್ತುಗಳನ್ನು ಹಾಕುವುದಕ್ಕೆ ಸಾಧ್ಯವಿಲ್ಲವೆನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದನ್ನು ತಪ್ಪಿಸಬೇಕಾದರೆ ಗೌರ್ನಮೆಂಟ್ ಆಫ್ ಇಂಡಿಯಾ ದಲ್ಲಿರತಕ್ಕ ಅದಕ್ಕೆ ಸಂಬಂಧಪಟ್ಟ ಕಾನೂನನ್ನು ಮೈಸೂರು ರಾಜ್ಯಕ್ಕೆ ಅನ್ವಯಿಸಿದರೆ ನಾವು ಹಾಕತಕ್ಕ ಶರತ್ತುಗಳಿಗೆ ಕಾನೂನಿನ ಬಲ ದೊರಕೆದ. ಹಾಗಾಗುತ್ತದೆ. ಸ್ಟೇಟ್ ರೀ ಆರ್ಗನೈಸೇಷನ್ ಆಗುವುದಕ್ಕಿಂತ ಮುಂಚೆ "ಬಿ" ರಾಜ್ಯಗಳಿಗೆ ಇದು ಅನ್ವಯಿಸಿರಲಿಲ್ಲ. ಅದು ಈಗಾಗಲೇ ಬಾಂಬೆ ಕರ್ನಾಟಕ ಪ್ರದೇಶಕ್ಕೆ ಅನ್ವಯವಾಗಿದೆ. ಕೊಡಗು, ಮದ್ರಾಸ್ ಭಾಗಗಳಿಗೂ ಅನ್ವಯವಾಗಿದೆ. ಹೈದರಾಬಾದ್ ಭಾಗಗಳಲ್ಲಿ ಮತ್ತು ಹಳೆಯ ಮೈಸೂರು ಭಾಗಗಳಲ್ಲಿ ಮತ್ತು ಎಲ್ಲಾ ಭಾಗಗಳಿಗೂ ಅನ್ವಯಿಸಿದರೆ ಶರತ್ತುಗಳು ಕ್ರಮವಾಗಿ ಕಾನೂನು ಪ್ರಕಾರವಾಗುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರ ಜಮೀನು ಮಂಜೂರು ಮಾಡುವ ಕಾಲದಲ್ಲಿ ಸರ್ಕಾರದ ಉದ್ದಿಶ್ಯ ಮಹತ್ವದ್ದಾಗಿದ್ದರೂ ಬಡವರು, ಹಿಂದುಳಿದ ಹಂಗಡಗಳವರ ಮತ್ತು ಹರಿಜನ ಗಿರಿಜನರ ವಿಷಯವಾಗಿ ಇಂತಹ ಶರತ್ತುಗಳನ್ನು ಹಾಕಿದ್ದರೂ ಅವರಿಂದ ಜಮೀನನ್ನು ಕೊಂಡು ಕೊಂಡು ಅವರಿಗೆ ಜಮೀನು ಇಲ್ಲದೆ ಇರುವಹಾಗೆ ಮಾಡಿ ಅನಾನುಕೂಲವಾಗುತ್ತಿದೆ. ಕಡ್ಡಾಯವಾಗಿ ಕಾನೂನನ್ನು ಮೈಸೂರು ರಾಜ್ಯಕ್ಕೆ ಅಳವಡಿಸುವ ರೀತಿಯಿಂದ ಈ ಮಸೂದೆಯನ್ನು ತರಲಾಗಿದೆ. ಮಾನ್ಯ ಸಭೆಯವರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಕಂದಾಯ ಸಚಿವರು ತಂದಿರತಕ್ಕ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಜೊತೆಯಲ್ಲಿ ಈಗ ಸರ್ಕಾರ ಮಂಜೂರು ಮಾಡತಕ್ಕ ಅನೇಕ ಜಮೀನುಗಳಿಗೆ ಅವರು 15 ವರ್ಷ ಕರಬಾರೆ ಮಾಡಬಾರದು ಎಂದು ಒಂದು ಶರತ್ತನ್ನು ಹಾಕುತ್ತಾ ಇದ್ದಾರೆ. ಈ ಶರತ್ತು ಕಾಯಂ ಆಗಿ ಉಳಿಯಬೇಕು ಎನ್ನುವ ಉದ್ದೇಶದಿಂದ ಮಸೂದೆಯನ್ನು ತರಲಾಗಿದೆ. ಆದರೆ ಈಗಾಗಲೇ ಕಳೆದ 15-20 ವರ್ಷಗಳಿಂದ ಹರಿಜನ ಗಿರಿಜನರಿಗೆ ಮಂಜೂರು ಮಾಡಿರತಕ್ಕ ಅನೇಕ ಜಮೀನುಗಳು ಈಗಾಗಲೇ ಅವರ ಕೈಯಿಂದ ಬೇರೆಯವರು ಕಬಳಿಸಿಕೊಂಡಿದ್ದಾರೆ. ಜೊತೆಗೆ ಶಿವಮೊಗ್ಗಾ ಜಿಲ್ಲೆಯಲ್ಲಿ ಅದರಲ್ಲೂ ಕೂಡ ಶರಾವತಿ ಯೋಜನೆ ಪ್ರಾರಂಭವಾದ ಮೇಲೆ ನಿರಾಶ್ರಿತರಿಗಾಗಿ ಸರ್ವೀಸಾರು ಎಕರೆ ಜಮೀನುಗಳನ್ನು ಪುನರ್ವಸತಿ ಯೋಜನೆಯ ಅಂಗವಾಗಿ ಮಂಜೂರು ಮಾಡರಾಗಿದೆ. ಅಂಥ ಫಲವತ್ತಾದ ಭೂಮಿಯನ್ನು ನಿರಾಶ್ರಿತರಿಗೆ ಕೊಡರಾಗಿತ್ತು. ಈ ಕಾನೂನನ್ನು ಉಲ್ಲಂಘನೆಮಾಡಿ ಅನೇಕ ಜಮೀನುಗಳನ್ನು ಬೇರೆಯವರು ಕಾನೂನಿಗೆ ವಿರುದ್ಧವಾಗಿ ಮಾಡಿಕೊಂಡಿದ್ದಾರೆ, ಪ್ರಾಸ್ಪೆಕ್ಟೀವ್ ಎಫೆಕ್ಟ್‌ಗಿಂತ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ತರುವುದು ಉತ್ತಮವಾಗುತ್ತದೆ. ಹಿಂದೆ ಆಗಿರತಕ್ಕ ಗ್ರಾಂಟುಗಳನ್ನು ಕಾನೂನಿನ ವಿರುದ್ಧವಾಗಿ ಸರ್ಕಾರ ಹಾಕಿರತಕ್ಕ ಶರತ್ತುಗಳಿಗೆ ವಿರುದ್ಧವಾಗಿ ಕ್ರಯಕ್ಕೆ ಪಡೆದಿದ್ದಾರೆ ಅಂತಹವನ್ನು ವಜಾ ಮಾಡಿ ಪುನಃ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ಈ ಮಸೂದೆಯಲ್ಲಿ ಸ್ವಲ್ಪ ಬದಲಾವಣೆಮಾಡಬೇಕು. ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವ ರೀತಿಯಲ್ಲಿ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕೆಂದು ಕಂದಾಯಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ. ಇಲ್ಲದೆಹೋದರೆ ಜನರಿಗೆ ಹೆದರಿಕೆ ಬರುವುದಿಲ್ಲ. ನಮಗೆ ಗೊತ್ತಿರುವ ಹಾಗೆ ಶಿವಮೊಗ್ಗಾ, ಭದ್ರಾವತಿ, ಹೊನ್ನಾಳಿ ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ ಫಲವತ್ತಾದ ಭೂಮಿಯನ್ನು ಪ್ರಮುಖರು ಮತ್ತು ಬಲಾಢ್ಯರು ಕಬಳಿಸಿಕೊಂಡಿದ್ದಾರೆ ಅಂತಹವರಿಂದ ಜಮೀನನ್ನು ವಾಪಸ್ ಪಡೆದು ಜಮೀನಿಲ್ಲದೆ ಇರುವವರಿಗೆ ಹಂಚುವ ಉದ್ದೇಶದಿಂದ ಕಂದಾಯ ಮಂತ್ರಿಗಳು ಮುಂದೆ ಬರಬೇಕೆಂದು ಕೇಳಿ ಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ಸರ್ಕಾರದವರು ಕೊಡತಕ್ಕ ಜಮೀನನ್ನು ಪರಭಾರೆ ಮಾಡಬಾರದು ಎನ್ನತಕ್ಕ ಒಂದು ಘನ ಉದ್ದೇಶ ಇಟ್ಟುಕೊಂಡು ಈ ತಿದ್ದುಪಡಿಯನ್ನು ತೆಗೆದುಕೊಂಡುಬಂದಿದ್ದಾರೆ. ಈ ತಿದ್ದುಪಡಿಯನ್ನು ಬಹಳ ಹಿಂದೆಯೇ ಏಕಕ್ಕೆ ತರಲಿಲ್ಲ ಎನ್ನುವ ಬಗ್ಗೆ ಅಕ್ಷೇಪಣೆ ಎತ್ತಬೇಕಾಗಿದೆ. ಸಹಸ್ರಾರು ಎಕರೆ ದರಖಾಸು ಜಮೀನು

(ಶ್ರೀ ಟಿ. ಆರ್. ಶಾಮಣ್ಣ)

ಕೊಟ್ಟಿದ್ದರೂ ಅದನ್ನು ಉಳಿಸಿಕೊಂಡಿರುವವರು ಬಹಳ ಕಡಿಮೆ. ಲ್ಯಾಂಡ್‌ಗ್ರಾಂಟ್ಸ್ ಕಮಿಟಿ ಮಾಡಿ ಪುನರ್‌ವಸತಿ ಜಮೀನುಗಳನ್ನು ನಾಮಕಾವಸ್ತೆ, ಬೇರೆಯವರ ಹೆಸರಿಗೆ ಬರೆಸಿ ಪುನಃ ತಮ್ಮ ಹೆಸರಿಗೆ ಬರೆಸಿಕೊಂಡಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಆದುದರಿಂದ ಯಾವ ಉದ್ದೇಶದಿಂದ ಈ ಜಮೀನನ್ನು ಬಡವರಿಗೆ ಕೊಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿತ್ತೋ ಅದು ಹೆಚ್ಚುಕಡಿಮೆ ನಿಷ್ಪ್ರಯೋಜನವಾಗಿದೆ ಎಂದು ಹೇಳಿದರೆ ತಪ್ಪಾಗದಾದು. ಆದರ ಜೊತೆಗೆ ಸ್ಟೇ'ನಲ್ಲಿ ಕಂಡೀಷನ್ಸ್ ಹಾಕಬಾರದು ಎಂದು ಒಂದು ನಿಬಂದನೆ ಇರುವುದರಿಂದ ಈ ತಿದ್ದುಪಡಿ ಆವಶ್ಯಕವಾಗಿ ಬೇಕಿತ್ತು. ನಾನು ತಿಮ್ಮಪ್ಪನವರು ಹೇಳಿರತಕ್ಕ ಸಲಹೆಯನ್ನು ಒಪ್ಪುತ್ತೇನೆ. ಅನೇಕ ವಿಚಾರಗಳಲ್ಲಿ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಡಬೇಕೆಂದು ಜಾರಿಗೆತರುವುದಕ್ಕೆ ಪ್ರಯತ್ನ ಪಡುತ್ತೀರಿ. ಇದಕ್ಕೂ ಏತಕ್ಕೆ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಡಬಾರದು ಎನ್ನುವ ಬಗ್ಗೆ ಸರ್ಕಾರದವರು ಸಾಧ್ಯವಾದಷ್ಟು ಯೋಚನೆಮಾಡಿ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಈ ಕಾನೂನು ಅತ್ಯಗತ್ಯವಾಗಿದೆ. ಈ ಭೂನುದಾರಣೆ ಜಾರಿಗೆ ಬಂದ ತಕ್ಷಣ ಜಮೀನನ್ನು ಉಳಿದೆ ಇದ್ದರೆ ಬೇರೆಯವರಿಗೆ ಕೊಡತಕ್ಕ ನನ್ನಿವೇಶ ನಮ್ಮಲ್ಲಿದೆ. ಅಂಥಾದ್ದರಲ್ಲಿ ಬಡವರಿಗೆ ಕೊಟ್ಟಿದ್ದನ್ನು ಪುನಃ ಅನುಕೂಲಸ್ಥರು ತೆಗೆದುಕೊಳ್ಳುವುದಕ್ಕೆ ಅವಕಾಶ ವಿರುವುದು ನ್ಯಾಯವಾದುದು ಅಲ್ಲ. ಕೆಲವು ವರ್ಷಗಳು ಏಲನಿಯೇಟ್ ಮಾಡುವುದಕ್ಕೆ ಸಾಧ್ಯವಾಗದಹಾಗೆ ಕಂಪೀಷನ್ ಹಾಕುತ್ತೀರಿ. 10–20 ವರ್ಷಗಳ ಕಾಲವನ್ನು ಏನಾದರೂ ನಿಗದಿ ಮಾಡಿದರೆ ಸಾಕೇ ಎಂದು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ತಾವು ಜಮೀನನ್ನು ಪರಬಾರೆ ಮಾಡಬಾರದು ಎಂದು ನಿಬಂದನೆಯನ್ನು ಹಾಕತಕ್ಕ ನದುದ್ದೇಶವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಆದಕ್ಕೆ ತಕ್ಕಹಾಗೆ ಪರಬಾರೆ ಮಾಡದೆ ಇರುವುದಕ್ಕೆ ಜಮೀನುಯಾರಿಗೆ ಕೊಡುತ್ತೀರೋ ಅವನಿಗೆ ಅದರ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಜಮೀನು ಒಂದನ್ನೇ ಕೊಟ್ಟರೆ ಸಾಗುವಳಿ ಮಾಡುವುದಕ್ಕೆ ಅವನಿಗೆ ತಾಪತ್ರಯ ನೂರಾರು ಇರುತ್ತವೆ. ಬರಗಾಲ ಬಂತು ಎಂದರೆ ಜಮೀನಿನಲ್ಲಿ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಆ ವರ್ಷಗಳಲ್ಲಿ ಅವನು ಜೀವನ ನಡಸ್ಯಬೇಕು. ಅದರ ಜೊತೆಗೆ ಮದುವೆ ಮುಂಜಿ, ಸಾವು, ನೋವು ಕಾಯಿಲೆಕಸಾರೆ ಇವುಗಳಿಂದಾಗಿ ಸಾಲಗಳು ಆಗುತ್ತವೆ. ನಮ್ಮನೆ ಬಿಟ್ಟೀ ಜಮೀನು ಸಿಗುತ್ತದೆ ಮಾಡಿಕೊಳ್ಳೋಣ ಎಂದು ಕೆಲವರು ಇರುತ್ತಾರೆ. ಇನ್ನು ಕೆಲವರು ಕಡುಬಡತನದಿಂದ ಜಮೀನನ್ನು ಮಾಡಿಕೊಳ್ಳಲೇ ಬೇಕು ಎನ್ನುವ ಸಂದರ್ಭ ಬರುತ್ತದೆ. ಜಮೀನನ್ನು ಕೊಟ್ಟರೆ ಅದನ್ನು ಉಳಿಸಿಕೊಳ್ಳುವುದಕ್ಕೆ ಸಹಾಯವನ್ನು ಮಾಡಬೇಕು. ಜಮೀನು ಕೊಡತಕ್ಕ ಸಾಧ್ಯತೆಗಳು ಇರುವ ಕಡೆ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಜಮೀನು ಹಂಚುವಾಗ ಜಮೀನನ್ನು ಕಾಲಾನುಕಾಲ ಸಾಗುವಳಿ ಮಾಡಿಕೊಂಡು ಸುಖವಾಗಿ ಜೀವನ ಮಾಡುವುದಕ್ಕೆ ಏನುಮಾಡಬೇಕು ಎಂದು ಯೋಚನೆಮಾಡಬೇಕು ಇಲ್ಲದೇ ಹೋದ ಸಂದರ್ಭದಲ್ಲಿ ಜಮೀನುಮಾರಿಕೊಳ್ಳುವ ಸಂದರ್ಭ ಉಂಟಾಗುತ್ತದೆ.

4–30 P.M.

ಜಮೀನು ಮಾಡಿಕೊಳ್ಳಬೇಕು ಎನ್ನುವವರಿಗೆ ನನ್ನ ಕಾಳಜಿಯಿಲ್ಲ, ಅವರಿಗೆ ಜಮೀನನ್ನು ಕೊಡಬಾರದು. ಜಮೀನನ್ನು ಸಾಗುವಳಿ ಮಾಡಬೇಕು, ಮಕ್ಕಳು ಮರಿ ಸಾಕಬೇಕು ಎನ್ನುವವರಿಗೆ ಜಮೀನು ಕೊಡಿ. ಜೊತೆಗೆ ಜಮೀನನ್ನು ಸಾಗುವಳಿ ಮಾಡುವ ಅವಕಾಶ ಮಾಡಿಕೊಡಬೇಕು. ಸರ್ಕಾರದವರು ಇದನ್ನು ಯೋಚನೆ ಮಾಡದೆ ಹೋದ ಪಕ್ಷದಲ್ಲಿ ಅವರು ಹನು ದಾನ ಕೊಟ್ಟರೂ, ಹನುವನ್ನು ಸಾಕುವುದಕ್ಕೆ ಯೋಚನೆ ಮಾಡದೆ ಕಟುಕರ ಕೈಗೆ ಹಾಕುವುದಕ್ಕೆ ಅವಕಾಶವಾಗುತ್ತದೆ, ಸಣ್ಣ ಹಿಡುವಳಿ ಇರತಕ್ಕ ಸಣ್ಣ ರೈತ ಕಾಲಾನುಕಾಲದಲ್ಲಿ ಜೀವನ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಈ ಮೂಲಭೂತವನ್ನು ರಿಟ್ರಾಸ್ಪೆಕ್ಟೀವ್ ಆಗಿ ಜಾರಿಗೆ ತರುವುದಕ್ಕೆ ಸಾಧ್ಯವಿದೆಯೇ ಎಂದು ರೆವಿನ್ಯೂ ಮಂತ್ರಿಗಳು ಯೋಚನೆ ಮಾಡಿ, ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಯೋಚನೆ ಮಾಡಬೇಕು. ಜಮೀನಿನಿಂದ ಲಾಭ ಪಡೆಯುವುದಕ್ಕೋಸ್ಕರ ಯಾರು ಜಮೀನನ್ನು ಪಡೆಯುತ್ತಾರೋ ಅಂಥವರಿಗೆ ಹಂಚಬಾರದು ಎಂದು ಭೂನುಧಾರಣಾ ತಿದ್ದುಪಡಿಯ ಬಗ್ಗೆ ಮಾತನಾಡುವಾಗ ಅರಿಕೆಮಾಡಿಕೊಂಡಿದ್ದೆ. ಜಮೀನು ಹಂಚುವ ಕಾಲದಲ್ಲಿ ಆಯಾ ಜಮೀನುಗಳನ್ನು ಹಂಚುವ ಭಾಗದಲ್ಲಿ ಹಂಚಿದರೆ ಅನುಕೂಲವಾಗುತ್ತದೆ. ವ್ಯವಸಾಯ ಮಾಡುವವರಿಗೆ ಜಮೀನನ್ನು ಒದಗಿಸಿಕೊಡಬೇಕು. ಜಮೀನನ್ನು ಯಾರಿಗೆ ಕೊಡುತ್ತೀರೋ ಅಂಥವರು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಬೇರೆ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಈವರೆಗೆ ನಡೆದಂಥ ದೋಷ ದೋಷಗಳ ಮತ್ತು ಹಿಂದಿನ ಸರ್ಕಾರ ಮಾಡಿದಂಥ ಕೆಲಸಗಳ ಪರಿಣಾಮವಾಗಿ ಯಾರ ಸಮುವಾಗಿ ಸರ್ಕಾರ ಭೂಮಿಯನ್ನು ಗ್ರಾಂಟ್ ಮಾಡಿತ್ತೋ ಅದರಲ್ಲಿ 25 ಭಾಗ ಕೂಡ ಆ ರೈತರಲ್ಲಿ ಉಳಿದಿಲ್ಲ. ಅದಕ್ಕಾಗಿ ಹೊಸ ಗ್ರಾಂಟ್ ರೂಲ್ಸ್ ಅನ್ನು ಈಗ ಏತಕ್ಕೆ ಅಪ್ಲೈ ಮಾಡಕೂಡದು ಎನ್ನುವ ಒಳ್ಳೆಯ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ, ಅದು ಸ್ವಾಗತಾರ್ಹ. ನಮ್ಮ ಗೆಳೆಯರಾದ ತಿಮ್ಮಪ್ಪನವರು ರಿಟ್ರಾಸ್ಪೆಕ್ಟೀವ್ ಆಗಿ ಇಫೆಕ್ಟ್‌ಗೆ ಏತಕ್ಕೆ ಕೊಡಬಾರದು ಎಂದು ಹೇಳಿದರು. ಇದನ್ನು ರಿಟ್ರಾಸ್ಪೆಕ್ಟೀವ್ ಆಗಿ ಇಫೆಕ್ಟ್‌ಗೆ ಕೊಡುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಲಾ ಡಿಪಾರ್ಟ್‌ಮೆಂಟಿನಲ್ಲಿ ಕನ್‌ಸಲ್ಟ್ ಮಾಡಿ ಇಫ್ಕ್ಟ್‌ಗೆ ಕೊಡುವುದರಿಂದ ಯಾವ ತರಹದ ಹಾನಿಯೂ ಬರುವುದಿಲ್ಲ ಎಂದು ನನಗನ್ನಿಸುತ್ತದೆ. ಹಿಂದೆ ಯಾರ ಕೈಯಿಂದ ಜಮೀನನ್ನು ಕಿತ್ತುಕೊಂಡಿದ್ದರೋ ಯಾರಿಗೆ ಅನ್ಯಾಯವಾಗಿತ್ತೋ ಅವರ ಜಮೀನನ್ನು ತಿರುಗಿ ಕೊಡಿಸುವುದಕ್ಕಾಗಿ, ಯಾರ ಬೆನ್ನು ಮೂಳೆ ಮುರಿದಿದೆಯೋ ಅದನ್ನು ಮ್ಯಾನ್ಯುಪಿರೇಟ್ ಮಾಡುವ ಶಕ್ತಿ ಈ ಮನೆಯಲ್ಲಿ ಇದೆ ಎಂದು ಈ ಮಸೂದೆಯಿಂದ ತೋರಿಸಿಕೊಟ್ಟ ಹಾಗಾಗುತ್ತದೆ. ರಿಟ್ರಾಸ್ಪೆಕ್ಟೀವ್ ಇಫೆಕ್ಟ್‌ಗೆ ಕೊಡದಿದ್ದರೆ, ನಮ್ಮನ್ನೆ ಕಣ್ಣೀರು ಸುರಿಸಿದ ನಾಟಕವಾಗುತ್ತದೆ. ಆದ್ದರಿಂದ ರಿಟ್ರಾಸ್ಪೆಕ್ಟೀವ್ ಇಫ್ಕ್ಟ್‌ಗೆ ಕೊಡಲೇಬೇಕು, ಇದನ್ನು ಮಾನ್ಯ ರೆವಿನ್ಯೂ ಮಿನಿಸ್ಟರು ಒಪ್ಪಿಕೊಳ್ಳುತ್ತಾರೆಂದು ನನಗೆ ನಂಬಿಕೆ ಇದೆ. ಅವರ ಸುತ್ತಮುತ್ತ ಇರುವ ಎಷ್ಟು ಜನರ ಕೈಯಿಂದ ಜಮೀನು ಬಿಟ್ಟು ಹೋಗಿದೆ ಎನ್ನುವುದೂ ಅವರಿಗೆ ಗೊತ್ತಿದೆ. ಆದ್ದರಿಂದ ಇದನ್ನು ರಿಟ್ರಾಸ್ಪೆಕ್ಟೀವ್ ಇಫೆಕ್ಟ್‌ಗೆ ಕೊಟ್ಟರೆ, ಜನರಿಗೆ ಒಳ್ಳೆಯ ಸೇವೆ ಸಲ್ಲಿಸಿದಂತಾಗುತ್ತದೆ. ಪಬ್ಲಿಕ್ ಸೆಕ್ಟಾರ್ ಅಥವಾ ಪ್ರೈವೇಟ್ ಸೆಕ್ಟಾರ್‌ನಿಂದ ಅಥವಾ ಸರ್ಕಾರ ಸ್ವಂತವಾಗಿ, ಮಾದರಿಯಾಗಿ ವರ್ತನೆ ಮಾಡಬೇಕು. ನೀವು ಈ ತರಹ ವರ್ತಿಸಿದರೆ ಸರ್ಕಾರದ ಸಮಾಜವಾದಿ ಧೋರಣೆಯಲ್ಲಿ ಜನರಿಗೆ ಇನ್ನೂ ಹೆಚ್ಚು ಹೆಚ್ಚು ವಿಶ್ವಾಸ ಹುಟ್ಟುತ್ತದೆ. ಇಲ್ಲದಿದ್ದರೆ, ಹೆಸರಿಗೆ ಧೋರಣೆ ಇದೆಯೆಂದು ನಂಶಯ ಬೆಳೆಯುವುದಕ್ಕೆ ಆಸ್ಪದ ಕೊಟ್ಟಂತೆ 25 ವರ್ಷವಲ್ಲ, ಮುಂದೆ 25 ತಿಂಗಳು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದ ಹತ್ತಿರ ಲಕ್ಷಾಂತರ ಎಕರೆ ಭೂಮಿ ಗ್ರಾಂಟ್ ಕೊಡುವುದಕ್ಕೆ ಇದೆ; ಎಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಲ್ಯಾಂಡ್ ಗ್ರಾಂಡ್ ಕಮಿಟಿಯಲ್ಲಿ ಈ ಮನೆಯ ಬಹುಭಾಗ ಸದಸ್ಯರು ಸದಸ್ಯರಾಗಿದ್ದಾರೆ. ಆದರೂ ನಹ 15—20 ಎಕರೆಯನ್ನು ಹಂಚುವುದಕ್ಕೆ ಆಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿಮಗೆ ನಿಮ್ಮ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗಿಲ್ಲ ಎಂದು ಕಾಣುತ್ತದೆ.

ಶ್ರೀ ವಿ. ಎನ್. ಪಾಟೀಲ್.—ನನಗೆ ಅಲ್ಲಿಗೆ ಹೋಗುವುದಕ್ಕೆ ಆಗಿಲ್ಲ, ಆದರೆ ಬೇರೆ ಕ್ಷೇತ್ರದ ನಿಮ್ಮ ಪಕ್ಷದ ಸದಸ್ಯರು ಎಷ್ಟೆಷ್ಟು ಜಮೀನನ್ನು ಹಂಚಿದ್ದಾರೆ ಎಂದು ನೋಡಿದರೆ ಆಗ ನಮ್ಮ ಕ್ಷೇತ್ರದಲ್ಲಿ ಎಷ್ಟು ಹಂಚಿದ್ದೇವೆ ಎನ್ನುವುದು ನತ್ಯವಾದ ವಾದವಾಗುತ್ತದೆ. ನಾನು ಕಲ್ಲು ಎಸೆಯ ಬೇಕಾದರೆ ಗಾಜಿನ ಮನೆಯಲ್ಲಿ ಕೂತುಕೊಳ್ಳುವುದಿಲ್ಲ. ಸ್ಪೀಡ್ ಆಫ್ ಮಾಡಿ, ಲ್ಯಾಂಡ್ ಗ್ರಾಂಟ್ ಪ್ರಕಾರ ಸರ್ಕಾರದ ಹತ್ತಿರ ಇರುವ ಜಮೀನನ್ನು ರೈತರಿಗೆ ಹಂಚಿಬಿಡಿ. ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಜಮೀನು ಖಾಲಿ ಇದೆಯೋ ಅಲ್ಲಿ ಕೆಂಪು ಬಾವುಟ ಹಾಕಿ ರೈತರಿಗೆ ಹಂಚಿಬಿಟ್ಟಿದ್ದೇವೆ, ಆದಕ್ಕೆ ತಾವು ಇನ್ನೂ ಪಟ್ಟ ಕೊಟ್ಟಿಲ್ಲ. 20 ವರ್ಷಗಳಿಂದ ಆ ಜಮೀನುಗಳಲ್ಲಿ ಕೆಂಪು ಬಾವುಟ ಹಾಕಿದ್ದೇವೆ. ಯಾರು ಅಂಥ ಜಮೀನುಗಳನ್ನು ಮಾಡುತ್ತಿದ್ದಾರೋ ಅವರಿಗೆ ಕೊಟ್ಟು ಬಿಡಿ; ಒಂದು ಎಕರೆಯಾಗಲಿ, ಎರಡು ಎಕರೆಯಾಗಲೀ ಕೊಡಿ. ಇಲ್ಲಿ ಪಾರ್ಟಿಯ ಪ್ರಶ್ನೆಯನ್ನು ತೆಗೆದು ಕೊಳ್ಳಬೇಡಿ. ಅಪೋಜಿಷನ್ ಪಾರ್ಟಿಯಿಂದ ಹೇಳುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಡಿ. ಸರ್ಕಾರದ ಜಮೀನನ್ನು ರೈತರಿಗೆ ಕೊಡುವುದಕ್ಕೆ ಯಾವ ರೂಲ್ಸ್ ತರುತ್ತೀರೋ ಅದನ್ನು ಸ್ವಾಗತ ಮಾಡುತ್ತೇನೆ. ಅಪೋಜಿಷನ್ ಫಾರ್ ಅಪೋಜಿಷನ್ ಸೇಕ್ ಕ್ರಿಟಿಸೈಜ್ ಮಾಡುತ್ತೇವೆ ಎಂದು ಮನಸ್ಸಿನಲ್ಲಿ ನಂಶಯ ಇಟ್ಟುಕೊಳ್ಳಬೇಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಟ್ಟುಕೊಳ್ಳುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.—ತಮ್ಮಲ್ಲಿ ಎಷ್ಟು ಜಮೀನು ಇದೆ, ಅದನ್ನೆಲ್ಲಾ ಹಂಚುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಿ, ಆಗ ಅದಕ್ಕೆ ಎಲ್ಲರೂ ಒಂದಾಗಿ ತಮಗೆ ಸಪೋರ್ಟು ಮಾಡುತ್ತೇವೆ. ನಿಮ್ಮವರು ಯಾರಾದರೂ ಅಡ್ಡಗಾಲು ನಿಂತಿರಬಹುದು; ನಿಮ್ಮಲ್ಲೇ ದೊಡ್ಡ ಹೆಗ್ಗಣಗಳು ಅಡ್ಡಗಾಲು ಬಂದರೆ, ನಮ್ಮ ಕಡುಗೋಲು ನಿಮ್ಮ ಸಹಾಯಕ್ಕೆ ಬರುತ್ತದೆ. ತಾವು ಇದರ ಬಗ್ಗೆ ಧೈರ್ಯ ಪಡಿಮೆ ಮಾಡಿದರೆ, ಕ್ರಿಟಿಸಿಸಂ ಕೇಳಬೇಕಾಗುತ್ತದೆ. ಆ ತರಹ ಕ್ರಿಟಿಸಿಸಮ್ಸ್ ಕೇಳದ್ದೆ ಈ

(ಶ್ರೀ ವಿ. ಎನ್. ವಾಟೀಲ್)

ಮನೂದೆಯನ್ನು ಸಾಧ್ಯವಾದರೆ ಇವತ್ತೇ ರಿಟ್ರಾಸ್ಪೆಕ್ಟೀವ್ ಇಫೆಕ್ಟ್‌ಗೆ ಕೊಡುವುದಕ್ಕೆ ಪ್ರಯತ್ನ ಮಾಡಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು). – ಮಾನ್ಯ ಅಧ್ಯಕ್ಷರೇ, ಸಾವಿರಾರು ಎಕರೆ ಜಮೀನನ್ನು ಸರ್ಕಾರದವರು ಯಾವ ಬಡವರಿಗೆ ಕೊಟ್ಟರೋ ಅದು ಅವರ ಕೈಯಲ್ಲಿ ಇವತ್ತು ಉಳಿಯುಲಿಲ್ಲ ಎಂದು ಗೊತ್ತಾಗಿ, ಆ ಬಾಧೆಯನ್ನು ತಪ್ಪಿಸಬೇಕು ಎನ್ನುವ ಸದುದ್ದೇಶದಿಂದ ಈ ಮನೂದೆಯನ್ನು ತಂದಿದ್ದಾರೆ. ಇದು ಬಡವರ ದೃಷ್ಟಿಯಿಂದ ಮೆಚ್ಚತಕ್ಕಂಥ ವಿಚಾರ. ಆದರೆ ನನ್ನ ಗೆಳೆಯರು ಮಾತನಾಡುತ್ತಾ ಇದುವರೆಗೆ ಏಕಕ್ಕೆ ಈ ಮನೂದೆಯನ್ನು ತರಲಿಲ್ಲ ಎಂದು ಹೇಳಿದರು; ಆ ಮಾತು ಒಪ್ಪತಕ್ಕದ್ದಲ್ಲ ಈಗಿರಾದರೂ ಸರ್ಕಾರದವರು ಈ ಮನೂದೆಯನ್ನು ತಂದಿದ್ದಾರೆ ಎಂದು ಸಂತೋಷಪಟ್ಟುಕೊಂಡು ಅದನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಬೇಕು ಎನ್ನುವುದರ ಬಗ್ಗೆ ಸಲಹೆ ಕೊಡುವುದು ನೂಕ್ಕ ಎಂದು ನಾನು ಹೇಳುತ್ತೇನೆ. ನನ್ನ ಗೆಳೆಯರು ಹೇಳಿದ ಘೂರು ನಾಲ್ಕು ವಿಚಾರಗಳನ್ನು ಒಪ್ಪಿಕೊಂಡು, ನಾನು ಅವರ ಜೊತೆಗೆ ಒಂದೆರಡು ಸಲಹೆಗಳನ್ನು ಸೇರಿಸಬೇಕು ಎಂದು ಅಭಿಪ್ರಾಯ ಪಡುತ್ತೇನೆ. ಬಹಳ ಮುಖ್ಯವಾಗಿ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಎನ್ನತಕ್ಕ ವಿಷಯ ಇದೆ. ಬಡವರಿಗೆ ಇದು ಶತ್ರುಪ್ರಾಯವಾದ ಕಾನೂನು ಎಂದು ಈಗ ಸರ್ಕಾರದವರು ಮನಸ್ಸು ಮಾಡಿ ಅಪರೇಷನ್ ಅಪಾನ್ ನಡ್ ಪ್ರಾಪರ್ಟಿ ಟ್ರಾನ್ಸ್‌ಫರ್ ಇದರ ಪ್ರಕಾರ ಆಗಬಾರದು. ಕೊಂಡುಕೊಳ್ಳುವವರಿಗೆ ಹಿತ ರಕ್ಷಣೆಗೆ ಏನೂ ಬೆಂಬಲ ಕೊಡುತ್ತಾ ಇದ್ದೇವೆಯೋ ಅದು ಹೋಗಬೇಕು ಎನ್ನುವ ಸದುದ್ದೇಶದಿಂದ ಇದನ್ನು ತಂದಿದ್ದಾರೆ. ಕಾನೂನು ಪಂಡಿತರನ್ನು ಕೇಳಿ ಇದರ ಉಳಿವು, ಅಳಿವು ಹೇಗಿದೆ ಎಂದು ಪರಿಶೀಲನೆ ಮಾಡಿ ಇದರ ಲೂಪ್‌ಹೋಲ್ಸ್, ಅಂದರೆ ತೂತು ರಂಧ್ರ ಇವನ್ನೆಲ್ಲಾ ಪರಿಶೀಲನೆ ಮಾಡಿ ಬಡವರಿಗೆ ರಕ್ಷಣೆ ಕೊಡತಕ್ಕ ಬಗ್ಗೆ, ಅವರು ಹೇಳುವ ರೀತಿಯಲ್ಲಿ, ಭೂಮಿ ಬಡವರಿಂದ ಕೊಚ್ಚಿಕೊಂಡು ಹೋಗದಂತೆ ಬಂಡೋಬಸ್ತು ಮಾಡಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಮಗೆ ಸ್ವರಾಜ್ಯ ಬಂದು 25 ವರ್ಷಗಳಾಯಿತು, ಭೂಮಿಯನ್ನು ಕತ್ತುಕೊಳ್ಳುವವರ ಹಾವಳಿ ಜಾಸ್ತಿಯಾಯಿತೋ ಏನೋ ಎಂದು ನೋಡಿದರೆ, ಇತ್ತೀಚೆಗೆ ಇದರ ಪ್ರಭಾವ ಜಾಸ್ತಿಯಾಯಿತು ಎಂದು ಸಾಕ್ಷಿಗಳಿಂದ ಗೊತ್ತಾಗುತ್ತದೆ. ಹೀಗೆ ಇದನ್ನು ಬೆಳೆಯುವುದಕ್ಕೆ ಬಿಡುತ್ತಾ ಹೋದರೆ ಒಂದು ಕಡೆ ಕೊಟ್ಟದ್ದು ಮತ್ತೊಂದು ಕಡೆ ನಾಶವಾಗುತ್ತದೆ; ಅದನ್ನು ತಪ್ಪಿಸಬೇಕು ಎನ್ನುವ ಸದುದ್ದೇಶದಿಂದ ಈ ಮನೂದೆಯನ್ನು ತಂದಿದ್ದಾರೆ. ತಮ್ಮ ಜೀವನಕ್ಕೆ ಇರತಕ್ಕ ಜಮೀನನ್ನು ನುತ್ತಾಂ ಕಳೆದು ಕೊಂಡಿರತಕ್ಕ ಸನ್ನಿವೇಶಗಳು ಎಲ್ಲೆಲ್ಲಿ ಉಂಟಾಗಿದೆಯೋ ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮನೂದೆಯನ್ನು ರಿಟ್ರಾಸ್ಪೆಕ್ಟೀವ್ ಆಗಿ ಜಾರಿಗೆ ಕೊಡಬೇಕೆಂದು ನಾನು ಸಲಹೆಮಾಡುತ್ತೇನೆ. ಈ ಸಂದರ್ಭದಲ್ಲೇನಾಗುತ್ತದೆಂದರೆ ಹತ್ತು ವರ್ಷಗಳ ಹಿಂದೆ ಒಂದು ಸಾವಿರ ರೂಪಾಯಿಗೆ ಕೊಂಡ ಜಮೀನಿಗೆ ಇಂದು ಹತ್ತು ಸಾವಿರ ರೂಪಾಯಿ ಬೆಲೆಯಾಗುತ್ತದೆ. ಬಡವರು ಕಷ್ಟಕಾಲದಲ್ಲಿ ಅವರ ಜಮೀನನ್ನು ಮಾರಿಕೊಳ್ಳುವರು. ಅದಕ್ಕೆ ಅವಕಾಶ ಇರಬಾರದು. ಅದನ್ನು ತಪ್ಪಿಸಲು ಸರಕಾರ ಬಡವರಿಗೆ ಸಾಲಗಳ ಹಣದ ನೆರವು ನೀಡಬೇಕಾಗುತ್ತದೆ. ಈಗ ಈ ಕಾನೂನಿನಿಂದ ಒಂದು ಎಕರೆ ಜಮೀನು ಅವರಿಗೆ ವಾಪಸ್ಸು ಸೇರಿಸಿ ಕೊಡುವುದರಿಂದ ಸಂತೋಷವಾಗುವುದು. ಈ ಜಮೀನು ಪಡೆಯಬೇಕಾದರೆ ಎಷ್ಟು ಹಣ ಕೊಡಬೇಕೋ ಅದಕ್ಕೆ ಸರಕಾರ ತಾತ್ಕಾಲಿಕವಾಗಿ ನೆರವು ಕೊಡ ಬೇಕು. ಮತ್ತು ಆ ಜಮೀನನ್ನು ಯಾವ ಸಂದರ್ಭದಲ್ಲಿ ಕಳೆದುಕೊಳ್ಳುವರೋ ಆ ಸಂದರ್ಭದಲ್ಲಿ ರಕ್ಷಣೆ ಕೊಟ್ಟು ಆ ಜಮೀನು ಪರಾಧೀನ ಮಾಡದಂತೆ, ಕಳಕೊಳ್ಳದಂತೆ ನೋಡಿಕೊಳ್ಳಬೇಕು. ಇದರ ಜೊತೆಗೆ ಇನಾಂ ಜೆಮ್ಮೂರಿಗೆ ಸಂಬಂಧಪಟ್ಟಹಾಗೆ ತೋಟಿ ತಳವಾರರು, ಗ್ರಾಮ ನೌಕರರು, ನೀರಗಂಟಿ, ಪಟೇಲ ಶಾನುಭೋಗರು ಮುಂತಾದವರಿಗೆ ವೃತ್ತಿ ಸಂಬಂಧವಾದ ಇನಾಂ ಜಮೀನು ಗಳನ್ನು ಹಿಂದೆ ಕೊಟ್ಟಿದ್ದರು. ಅವನ್ನು ವಾಪಸು ತೆಗೆದುಕೊಂಡಿದ್ದರೆ ಪರಭಾರೆಯಾಗಿದ್ದರೆ ಅದನ್ನು ಮತ್ತೆ ಅವರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಈ ಅಂಕೆ ಬಹಳ ದಿವಸಗಳಿಂದ ಸರಕಾರದ ಮುಂದಿಡಲಾಗುತ್ತಿದೆ. ಇದಕ್ಕೆ ಬೇಕಾದ ನಿಯಮವನ್ನು ಈ ಕಾನೂನಿನಲ್ಲಿ ಅಳವಡಿಸ ಬಹುದು. ಇತ್ತೀಚೆಗೆ ಇದರ ವಿಚಾರ ಪತ್ರಿಕೆಯಲ್ಲಿ ಓದಿದ್ದೇವೆ.

It is stated here : 'transfer of any land made either by transfer or by grant.' Whether it is re-grant or original, it is a grant. When

it is a grant, this Law should be operative to protect the interests of these people to get back their lands.

ಹೀಗಿದ್ದರೂ ತಾನೇತಾನಾಗಿ ಜಮೀನು ಮಾರುವವರಿಗೇನು ಮಾಡುವುದು ಎಂಬ ಪ್ರಶ್ನೆ ಬರುವುದು. ಸರಕಾರಿ ಜಮೀನನ್ನು ರಿಸರ್ವ್ ಲ್ಯಾಂಡ್, ಗವರ್ನ್‌ಮೆಂಟ್ ಲ್ಯಾಂಡ್ ಎಂದು ಮಾಡಿ ಬಡವರಿಗೆ ರಿಸರ್ವಾಗಿ ಇಟ್ಟು ಆ ಸಂಬಂಧವಾಗಿ ಸೂಟ್ ಇರಬಾರದೆಂದು ಮದ್ರಾಸಿನಲ್ಲಿ ಮಾಡಿದ್ದಾರೆ. ಇದರ ವಿಚಾರದಲ್ಲಿ ಕಾನೂನು ಪಂಡಿತರೇನು ಹೇಳುವರೋ ಗೊತ್ತಿಲ್ಲ.

But the suit in regard to such lands granted to the poor should never lie in a Court of Law.

ಎಂದು ಮಾಡಬಹುದು. ಮದ್ರಾಸಿನಲ್ಲಿ ಬಡವರಿಗೆ ಕೊಟ್ಟ ಜಮೀನಿನ ವಿಚಾರದಲ್ಲಿ ಕೋರ್ಟ್‌ಗೆ ಹೋಗಬಾರದು ಎಂಬ ರಕ್ಷಣೆ ಇರಬೇಕಂತೆ. ರೈಲ್ವೆ ಇಲಾಖೆಯಲ್ಲಿ ಮಾಡಿರುವಂತೆ ಮಾಡಬಹುದು. ಜಮೀನನ್ನು ರಕ್ಷಣೆ ಮಾಡಲು ಅಲ್ಲಿ ತಕ್ಕ ವ್ಯವಸ್ಥೆ ಮಾಡಿದ್ದಾರೆ. ಅಂತೂ ಲೂಪ್‌ಹೋಲ್ಸ್ ಇಲ್ಲದಂತೆ ಮಾಡಬೇಕು.

Unless there is an element of criminality in the procedure or proceedings, the matter should never be taken to the Court of Law. Between the intention of the Governmnt and th execution, there will be many loopholes by way of interpretation, so much so, the benefits are lost to the poor people. ಸದುದ್ದೇಶದಿಂದ ಕಾನೂನು ಮಾಡುವರು. ಆದರೆ ಗುರಿಮುಟ್ಟುವುದಕ್ಕೆ ಅದು ಸಹಾಯ ಕವಾಗಿರಬೇಕು. ಇದರ ಬಗ್ಗೆ ಲಾ ಇಲಾಖೆಯವರೊಂದಿಗೆ ಸಮಾಲೋಚನೆ ನಡೆಸಿ ತಕ್ಕಂತೆ ರೂಲ್ಸ್‌ನಲ್ಲಿ ನಿಯಮಗಳನ್ನು ಅಳವಡಿಸಬೇಕು. ಇದರಿಂದ ಬಡವರ ಆಸ್ತಿಗೆ ರಕ್ಷಣೆ ಇರಬೇಕು.

ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಎಂದು ಹೇಳುವುದು ಒಪ್ಪತಕ್ಕ ವಿಚಾರವೇ ಆಗಿದೆ. ಪರಭಾರೆ ಮಾಡಬಾರದು, ಎಂದು ಹೇಳುವಾಗ ಹಾಗೆ ಮಾಡಲು ಕಾರಣವಿರುವುದು. 5 ಎಕರೆಗೆ ಕಡಮೆ ಜಮೀನು ಇದ್ದರೆ ಸರಕಾರದ ಅನುಮತಿ ಇಲ್ಲದೆ ಅಂಥವರಿಂದ ಕೊಳ್ಳಬಾರದೆಂದು ನಿರ್ಬಂಧ ಮಾಡಬಹುದು ಸೂಕ್ತ. ಸಬ್‌ರಿಜಿಸ್ಟ್ರಾರರು ಏಕೆ ಮಾಡುವುದು ಎಂದು ಕೇಳುವಂತೆ ಮಾಡಬೇಕು. ಮದುವೆಗಾಗಿ ಆಥವಾ ಕಾಯಿಲೆ ಮುಂತಾದ ತೊಂದರೆಗಳಿಗೆ ಹಣ ಬೇಕಾದಾಗ ಮಾರಬಹುದು. ಅಂಥ ನಂದರ್ಭಗಳಲ್ಲಿ ಸರಕಾರ ಸಹಾಯ ಮಾಡಿದರೆ ಪರಭಾರೆ ಮಾಡುವುದಿಲ್ಲ. ಹಾಗೆ ಮಾಡುವುದು ಒಳ್ಳೆಯದು. ಕೋರ್ಟ್‌ನಲ್ಲಿ ಡಿಕ್ರಿಯಾದರೂ ಕೂಡ ವ್ಯವಸಾಯಗಾರರ ಉಪಕರಣಗಳು, ದನಕರುಗಳು ಮುಂತಾದುವನ್ನು ಹರಾಜು ಹಾಕಬಾರದು ಕಿತ್ತುಕೊಳ್ಳಬಾರದು ಎಂದು ವಿಧಿಸಿರುವಂತೆ, ಸಾಲ ತೀರಿಸಲು ಶಕ್ತಿ ಇಲ್ಲದಿದ್ದಾಗ ಮಾರಾಟ ಮಾಡುವುದು ಉಂಟು, ತೊಂದರೆಗೆ ಸಿಕ್ಕುವುದುಂಟು. ಆಗ ಸರಕಾರ ಸಹಾಯ ಮಾಡಿ ಬಡವರು ತಮ್ಮ ಭೂಮಿಗಳನ್ನು ಮಾರಲು ಅವಕಾಶವಾಗದಂತೆ ನೋಡಿಕೊಳ್ಳಬೇಕು, ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಈ ಕಾನೂನಿನಲ್ಲಿ ಇದಕ್ಕೆ ಅವಕಾಶ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಪರಭಾರೆ ತಿಳಿಯದೆ ಮಾಡಿದರೆ ಸರಕಾರಿ ಜಮೀನೆಂದು ವಾಪಸು ಕೊಡಬೇಕಾಗುತ್ತದೆ. ಒಂದು ಸಾವಿರ ರೂಪಾಯಿ ಜಮೀನಿಗೆ ಐದು ಹತ್ತು ಸಾವಿರ ರೂಪಾಯಿ ಬೆಲೆಯಾಗಿದ್ದರೆ ಅದನ್ನು ಸರಕಾರ ವಹಿಸಿಕೊಂಡು ನ್ಯಾಷನಲ್ ಬಾಂಡ್ ರೂಪದಲ್ಲಿ ಆಥವಾ ಬೇರೆ ರೂಪದಲ್ಲಿ ಸರಕಾರ ಸಹಾಯ ಮಾಡಿ ಹಣ ಕೊಟ್ಟು ಕಂತಿನ ಪ್ರಕಾರ ಅದನ್ನು ತೀರಿಸಲು ಅವಕಾಶ ಮಾಡಿಕೊಡಬೇಕು. ರೆಸ್ಟೋರ್ಡ್ ಲ್ಯಾಂಡ್ ಎಂದು ಇದಕ್ಕೆ ಹೇಳಬಹುದು. ನಿಜವಾಗಿಯೂ ವ್ಯವಸಾಯಗಾರನಾದವನು ಯಾವ ಪಂಗಡದವನಾದರೂ ಕೂಡ ಅವನಿಂದ ಕೋರ್ಟ್ ಡಿಕ್ರಿ ತಂದು ದನಕರು ಮತ್ತು ಇಂಪ್ಲಿಮೆಂಟ್ಸನ್ನು ಕಿತ್ತುಕೊಳ್ಳದಂತೆ ವ್ಯವಸ್ಥೆ ಮಾಡಬೇಕು. ಕಳೆದುಕೊಂಡ ಮಗುವನ್ನು ಪೋಲೀಸಿನವರು ಹುಡುಕಿ ಕೊಟ್ಟರೆ ಅದನ್ನು ರೆಸ್ಟೋರ್ಡ್ ಬೇಬಿ ಎಂದು ಹೇಳುವಂತೆ ಕಳೆದುಕೊಂಡ ಜಮೀನನ್ನು ರೆಸ್ಟೋರ್ಡ್ ಲ್ಯಾಂಡ್ ಎಂದು ಉಳಿಸಲು ಅವಕಾಶವಾಗಬೇಕು. ರೆವೆನ್ಯೂ ಮಂತ್ರಿಗಳಿಗೆ ಈ ವಿಚಾರದಲ್ಲಿ ಬಹಳ ಅನುಭವವಿದೆ. ಕಾನೂನು ಪಂಡಿತರ ಸಲಹೆ ಪಡೆದು ನಾನು ತಿಳಿಸಿದ ಹಾಗೆ ತಕ್ಕ ರಕ್ಷಣೆ ಬಡ ವ್ಯವಸಾಯಗಾರರಿಗೆ ನೀಡಬೇಕು ಎಂದು ಸೂಚಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).— ಭೂಮಿಯನ್ನು ಪರಭಾರೆ ಮಾಡಬಾರದು ಎಂದು ಈ ಕಾನೂನು ತಂದಿರುವುದನ್ನು ನಾನು ಒಪ್ಪುತ್ತೇನೆ. ಹಾಗೆ ಮಾಡಿದ್ದರೆ ಕೆಲವು ಸಂದರ್ಭಗಳಲ್ಲಿ ಭೂಮಿ ಉಳಿಯುವುದಿಲ್ಲ. ಆದರೆ ಈ ವಿಚಾರದಲ್ಲಿ ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಎಂದು ಸೂಚಿಸಿದ್ದಾರೆ. ಒಂದು ವಿಚಾರ ಮಾತ್ರ ನಾನು ಒಪ್ಪುವುದಿಲ್ಲ, ಹಿಂದೆ ಆಗಿರುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುವುದನ್ನು ಒಪ್ಪುವುದಿಲ್ಲ. ದರಖಾಸ್ತು ಜಮೀನನ್ನು ಯಾವ ವರ್ಗದ ಜನರು ತೆಗೆದುಕೊಂಡಿದ್ದಾರೆ ಎಂದು ಕೂಲಂಕಷವಾಗಿ ಏಮರ್ಶೆ ಮಾಡಬೇಕಾಗಿದೆ. ಕೆಲವುವೇಳೆ ಗುಮಾಸ್ತರು ಅಥವಾ ಇತರರು ದರಖಾಸ್ತಿನಲ್ಲಿ ತೆಗೆದುಕೊಂಡಿರುವುದುಂಟು. ಅಂಥವರು ತೆಗೆದುಕೊಂಡು ಎರಡುಮೂರು ಸಾರಿ ಪರಭಾರೆ ಮಾಡಿರುವುದುಂಟು. ಭೂಮಿಯ ಕನಿಷ್ಟಮಿತಿ ಗೊತ್ತುಮಾಡಬೇಕಾದುದು ಮುಖ್ಯವಾದುದು. ಆರ್ಥಿಕ ಶಕ್ತಿಯಿಲ್ಲದಿರುವವರು ಭೂಮಿಯನ್ನು ಅಭಿವೃದ್ಧಿ ಪಡಿಸಲು ಶಕ್ತಿಯಿಲ್ಲದೆ ಪರಭಾರೆ ಮಾಡುವುದುಂಟು. ಹಳ್ಳಿಗಳಲ್ಲಿ ರೈತರ ಆರ್ಥಿಕಸ್ಥಿತಿ ಬಹಳವಾಗಿ ಕೆಟ್ಟಿದೆ. ದರಖಾಸ್ತಿನಲ್ಲಿ ಪಡೆದವರು ಸುಮಾರು 9 ಲಕ್ಷ ಎಕರೆ ಜಮೀನನ್ನು ಮಾರಿಕೊಂಡಿದ್ದಾರೆಂದು ಮೊನ್ನೆ ರೆವೆನ್ಯೂ ಮಂತ್ರಿಗಳು ಹೇಳಿದರು. ಅದಕ್ಕೆ ಕಾರಣ ಆರ್ಥಿಕಶಕ್ತಿ ಕುಂದಿರುವುದು. ಇನ್ನುಮುಂದೆ ಯಾರೂ ಕೂಡ ಜಮೀನನ್ನು ಪರಭಾರೆ ಮಾಡಬಾರದೆಂದು ಕಾನೂನು ಮಾಡುವುದು ಯೋಗ್ಯವಾದುದು. ಸಾಗುವಳಿಗೆ ಬಾರದಿರುವ ಜಮೀನನ್ನು ಸರಕಾರ ಉಳಿಸಿಕೊಂಡಿದೆ. ಆದರೆ ಅದನ್ನು ಹಂಚಿದಮಾತ್ರಕ್ಕೆ ಬಡತನ ನಿವಾರಣೆ ಯಾಗುವುದಿಲ್ಲ. ಹಂಚಲು ಇರುವ ಜಮೀನು 4 ಲಕ್ಷ ಎಕರೆ ಎಂದು ಅಂದಾಜು ಮಾಡಲಾಗಿದೆ. ಆದರೆ 80 ಲಕ್ಷ ಜನರಿಗೆ ಭೂಮಿ ಇಲ್ಲ. ಅವರಿಗೆ ಭೂಮಿ ಹಂಚುವುದೆಷ್ಟು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಸರ್ಕಾರದವರು ಭೂಹೀನರಿಗೆ ಒಂದೋ ಅಥವಾ ಎರಡೋ ಇಲ್ಲವೇ ನೂರು ನಾಲ್ಕು ಎಕರೆ ಖುಷ್ಕಿ ಭೂಮಿಯನ್ನು ಕೊಟ್ಟುಮಾತ್ರಕ್ಕೆ ದೇಶದಲ್ಲಿರತಕ್ಕ ಬಡತನ ಹೋಗುತ್ತದೆ ಎಂದರೆ ಅದು ಸರಿಯಾದುದಲ್ಲ. ಅಥವಾ ಹೆಚ್ಚು ಭೂಮಿ ಇರತಕ್ಕವರಿಂದ ಭೂಮಿಯನ್ನು ಕಿತ್ತು ಭೂಹೀನರಿಗೆ ಅದನ್ನು ಹಂಚಿದರೆ ಅದರಿಂದ ದೇಶದಲ್ಲಿ ಬಡತನ ನಿವಾರಣೆಯಾಗುವುದಿಲ್ಲ ಅದು ದೇಶದಲ್ಲಿ ಇನ್ನೂ ಶಾಶ್ವತವಾಗಿ ಉಳಿದೇ ಉಳಿಯುತ್ತದೆ. ಅಥವಾ ಇನ್ನೂ ಜಾಸ್ತಿ ಆದರೂ ಆಗ ಬಹುದು. ಭೂಹೀನರಿಗೆ ಈ ದಿವಸ ಸರ್ಕಾರದವರು ಕೊಡತಕ್ಕ ಭೂಮಿ ಏನಿದೆ ಅದರಲ್ಲಿ ಅವರು ಎಷ್ಟೇ ಮೆಹನತ್ತುಮಾಡಿ ವ್ಯವಸಾಯ ಮಾಡಿದರೂ ವರ್ಷದಲ್ಲಿ ಕೇವಲ 3-4 ತಿಂಗಳಿಗೆ ಆಗುವಷ್ಟು ಆದಾಯವನ್ನು ಪಡೆಯುವುದಕ್ಕಾಗುವುದಿಲ್ಲ. ಮಳೆಬಾರದಿದ್ದರೆ ಆ ಭೂಮಿಯಿಂದ ಆದಾಯ ಪಡೆಯತಕ್ಕ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಮೇಲಾಗಿ ಈ ದಿವಸ ಯಾರು ಯಾರು ಭೂಮಿಯನ್ನು ಪಡೆದು ಅದನ್ನು ಪರಭಾರೆ ಮಾಡಿದ್ದಾರೋ ಅಂಥವರ ಭೂಮಿಯನ್ನು ಕೊಂಡಿರತಕ್ಕ ಜನರು ಯಾರಿದ್ದಾರೆ ಅವರು ಅದಕ್ಕೆ ವಿಶೇಷ ಹಣವನ್ನು ಖರ್ಚುಮಾಡಿ ಅದನ್ನು ಅಭಿವೃದ್ಧಿಗೆ ತಂದಿರುತ್ತಾರೆ. ಆ ಭೂಮಿಯನ್ನು ವಾಪಸ್ ಅವರಿಂದ ಪಡೆಯಬೇಕಾಗಿದ್ದರೆ ಆ ಅಭಿವೃದ್ಧಿಗೆ ಮೆಚ್ಚಿ ಮಾಡಿರತಕ್ಕ ಖರ್ಚನ್ನೆಲ್ಲಾ ಯಾರು ಕೊಡುತ್ತಾರೆ? ಯಾರೋ ಒಬ್ಬ ದರಖಾಸ್ತಿನಲ್ಲಿ ಒಂದು ನಾಮಿನಲ್ ಬೆಲೆಗೆ ಭೂಮಿಯನ್ನು ಕೊಂಡು ಅದನ್ನು ಬೇರೆಯವರಿಗೆ ಲಾಭಕ್ಕೆ ಮಾರಾಟ ಮಾಡಿದ್ದರೆ, ಮತ್ತು ಅಂಥ ಭೂಮಿಯನ್ನು ಕೊಂಡವರು ಅಭಿವೃದ್ಧಿಮಾಡಿದ್ದರೆ ಅವುಗಳನ್ನು ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇನ್ನುಮುಂದೆ ಹಾಗೆ ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲದಂತೆ ಕಾನೂನು ಮೂಲಕ ತಡೆಗಟ್ಟುದರೆ ಸಾಕೆಂದು ಅನಿಸುತ್ತಿದೆ. ಈ ವಿಚಾರವನ್ನು ದೀರ್ಘವಾಗಿ ಆಲೋಚನೆ ಮಾಡದೆ ದುಡುಕಿದರೆ ಹುಚ್ಚುತನವಾಗುತ್ತದೆ. ಆದ್ದರಿಂದ ಹಿಂದಿನದನ್ನು ರೆಗ್ಯೂಲರೈಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲವೇ ಸರ್ಕಾರದವರು ಒಟ್ಟು ಭೂಮಿಯನ್ನೆಲ್ಲಾ ರಾಷ್ಟ್ರೀಕರಣ ಮಾಡಿಬಿಡಿ. ಕನಿಷ್ಟಪಕ್ಷ ಒಬ್ಬ ವ್ಯವಸಾಯದ ಕೂಲಿಗಾರನಿಗೂ ಕೂಡ ಅವನಿಗೆ ಅವನ ಬಡತನವನ್ನು ನೀಗಬೇಕೆಂಬ ಉದ್ದೇಶದಿಂದ ಅವನಿಗೆ ಭೂಮಿಯನ್ನು ಕೊಡುವುದಾದರೆ ಅವನಿಗೆ ಕನಿಷ್ಟಪಕ್ಷ ತಿಂಗಳಿಗೆ 250 ರೂಪಾಯಿಗಳ ಸಂಪಾದನೆ ತರಬಲ್ಲಂಥ ಭೂಮಿಯನ್ನು ಕೊಡಬೇಕು. ಅಂದರೆ ಅದು ಎಂಥಾ ಭೂಮಿ ಆಗಿರಬೇಕು, ಅದು ಯಾವ ಪ್ರಮಾಣದಲ್ಲಿರಬೇಕು ಅನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೇ? ಅಂಥಾ ಉತ್ಕೃಷ್ಟವಾದ ನೀರಾವರಿಯಾಗತಕ್ಕ ಅಪಾರ ಭೂಮಿ ನಮ್ಮಲ್ಲಿದೆಯೇ? ಅಂಥಾದ್ದು ಯಾವುದೂ ಇಲ್ಲ ಅನ್ನುವಾಗ ಈ ಭೂಹೀನರಿಗೆ ಭೂಮಿ ಹಂಚಿ ಅವರ ಬಡತನವನ್ನು ನೀಗುತ್ತೇವೆಂಬುದು ಒಂದು ಹುಚ್ಚುತನ. ಬರಿ ಭೂಮಿಯನ್ನು ಹಂಚಿದಾಕ್ಷಣಕ್ಕೆ ದೇಶದಲ್ಲಿ ಬಡತನ ಹೋಗುತ್ತದೆಯೇ!

ಶ್ರೀ ಪಾಟೀಳ್ ನಾಗರಾಜ್ (ಜಾಮರಾಜಪೇಟೆ).—ಹಾಗಾದರೆ ನೀವು ಆ ಪಾರ್ಟಿಯಿಂದ ರಾಜೀನಾಮೆಕೊಟ್ಟು ಹೊರಗಡೆ ಬರುತ್ತೀರಾ!

ಶ್ರೀ ಎಚ್. ಬಿ. ಕೆಂಚೇಗೌಡ.—ನೀವು ಯಾರ್ರಿ ಮಧ್ಯೆ ಬಾಯಿಹಾಕಿ ಮಾತನಾಡುವುದಕ್ಕೆ? ನಿಮಗೆ ಜಮೀನು ವ್ಯವಹಾರದ ಬಗ್ಗೆ ಎ. ಬಿ. ಸಿ. ಡಿ. ಗೊತ್ತಿಲ್ಲ. ಆದರೆ ನಾನು ಒಟ್ಟಿನಲ್ಲಿ ಹೇಳುವುದಿಷ್ಟೇ: ಹಿಂದೆ ಪರಭಾರೆಯಾಗಿರತಕ್ಕ ಜಮೀನುಗಳನ್ನು ರೆಸ್ಯೂಂ ಮಾಡತಕ್ಕ ವಿಚಾರವನ್ನು ಕೈ ಬಿಟ್ಟು ಮುಂದೆ ಪರಭಾರೆ ಆಗತಕ್ಕ ಜಮೀನುಗಳನ್ನು ರೆಸ್ಯೂಂ ಮಾಡುವಂತೆ ಕಾನೂನು ಮಾಡತಕ್ಕದ್ದು ಯುಕ್ತವಾದುದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. SUBBAYYA SHETTY (Surathkal).—Mr. Deputy Speaker, I wholeheartedly welcome this piece of legislation.

My friends who spoke before me, especially from the Opposition benches, stated that this is not retrospective and that this has to be made retrospective. I beg to differ from them. In my opinion, this Act, now as it is, is retrospective. The operative Section 2 of the Government Grants Act, 1895 (XV of 1895) states :

> "Nothing in the Transfer of Property Act, 1882, contained shall apply or be deemed ever to have applied to any grant or other transfer of land or of any interest therein heretofore made or hereafter to be made by or on behalf of the Government to or in favour of any person whomsoever; but every such grant and transfer shall be construed and take effect as if the said Act had not been passed."

In this context, I submit that so far lot of lands have been granted to the poor people. But because of their poverty they were compelled to transfer them to big landlords or some moneyed people. Since this is retrospective, I appeal to the Government to go seriously into all cases where such transfers have been made and cancel those transfers even if improvements have been made on those lands by the transferees : that is the only action we have to take. Since the well-to-do transferees have taken these lands with the evil intention of duping the poor people, this ill-begotten wealth should not be made to vest with them. The Government should take stringent action and cancel all those transfers, and take back all those lands without paying even a single paise for any improvement they have made on those lands.

I also submit on this occasion that several good pieces of land have been given as grant on different considerations such as political gift by the previous Governments. Even instances have come to notice in which even officials have given lands to their own kith and kin and taken lands in the name of their wives and nearest relations. Such cases should be examined and the Government should take those lands back and give those lands to the persons who are really poor.

We have also to examine why these lands are being transferred. Simply by granting 5 to 10 acres of land and making them inalienable, the land will not acquire any productive value. If the land has to be of any use to the poor people, the poor people must be made to cultivate the land and to put the land to profitable use. For this

(SRI B. SUBBAYYA SHETTY)

end, we must go to the root of the question why these transfers are made. The transfers are obviously made by the people because of their poverty. Now whenever a land is given and whichever land was formerly given to the poor people, and where it remained uncultivated. In such cases, Government should take adequate steps to see if adequate fund was given to the poor people, to make them to cultivate their land. Government should also see that they do not transfer those lands through the existing methods. The poor people keep their land fallow because they do not have any means to cultivate. My humble submission to Government is that in order to make land grants really effective and meaningful, the poor persons who are given grants of land, should be given enough fudns so that their lands may be put to profitable use and they may make their living from those lands.

With these words, I congratulate the Government for bringing this Bill. I once again welcome this Bill. I thank you so much for giving me this opportunity to speak.

5-00 P.M.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ). – ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಅಗಿಂದಾಗ್ಗೆ ಏಮರ್ಜೆಯನ್ನು ಮಾಡಿ ಅನೇಕ ಬಿಲ್‌ಗಳನ್ನು ಈ ಸಭೆಯ ಮುಂದೆ ತರತಕ್ಕದ್ದು ಸ್ವಾಭಾವಿಕ ವಾಗಿದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಆದರೂ ಕೂಡ ಈ ಬಿಲ್‌ಗಳು ಇಲ್ಲಿ ಬರುವುದ ರಿಂದ ಕತ್ರಿಕೆಗಳಲ್ಲಿ ಅವನ್ನು ಓದಿ ಸಂತೋಷಪಡತಕ್ಕದ್ದನ್ನು ನಾನು ನೋಡುತ್ತಿದ್ದೇನೆ. ಆದರೆ ಅವು ಕಾರ್ಯಗತವಾಗತಕ್ಕದ್ದನ್ನು ಏನೋ ನಾನು ಹೆಚ್ಚಿಗೆ ನೋಡುತ್ತಾ ಇಲ್ಲ. ಕಾರಣ ನನಗೆ ತಿಳಿದ ಹಾಗೆ, ಪ್ರಜಾಪ್ರಭುತ್ವ ಬಂದಮೇಲೆ ಹೊರಗಡೆಯಲ್ಲಿದ್ದು ಮಾತನಾಡತಕ್ಕ ಪ್ರತಿನಿಧಿಗಳು ಏನಿರು ತ್ತಾರೆಯೋ ಅವರು ಅಧೀಸಿಗೆ ಬಂದು ಕೂತು ನಂತರದಲ್ಲಿ ಬಹುತಃ ಎಲ್ಲ ಅಧಿಕಾರಿಗಳೇ ಹೇಳು ವುದನ್ನು ಒಪ್ಪಿಕೊಳ್ಳುವುದರಿಂದ ಅಧಿಕಾರ ಮಾಡಬೇಕೆನ್ನುವ ಮನೋಭಾವನೆ ತಾಳುವುದರಿಂದ ನಿಮ್ಮ ಕಾನೂನುಗಳು ನಿಜವಾಗಿಯೂ ಎಳೆಕ್ಕಿಗೆ ಇವತ್ತಿಗೂ ಜಾರಿಗೆ ಬರುತ್ತಾ ಇಲ್ಲ. ಈ ಕಾನೂನುಗಳನ್ನು ಹಿಂದೆ ಒಂದು ಸಾರಿ ಬಹುತಃ ಸರ್ಕಾರದವರು ಮಾಡಿದ್ದರೂ ಯಾವರೀತಿ ಅವನ್ನು ಜಾರಿಗೆ ತರುತ್ತಿದ್ದಾರೋ ಗೊತ್ತಿಲ್ಲ. ಬಹುತಃ ಹೈಕೋರ್ಟಿನಲ್ಲಿ ಅವು ಪ್ಯಾಲಿಡ್ ಆಗುವು ದಿಲ್ಲ, ಆದರೆ ಕಂಡೀಷನಲ್ ಗ್ರಾಂಟ್ ಮಾಡುವುದಕ್ಕಾಗುವುದಿಲ್ಲವೆಂಬುದಾಗಿ ಅನೇಕ ಸಾರಿ ತೀರ್ಮಾನ ಆಗಿರುವುದೂ ಕೂಡ ನನಗೆ ತಿಳಿದಿದೆ. ಇವತ್ತು ಇದನ್ನು ಪುನಃ ಈ ಸಭೆಯ ಮುಂದೆ ತಂದಿದ್ದಾರೆ. ಇವತ್ತೂ ಸಹ ಎಷ್ಟು ಜನರು ತಂತಮ್ಮ ಜಮೀನುಗಳನ್ನು ಮಾರಿಕೊಂಡಿದ್ದಾರೆಂಬು ದನ್ನು ಯಾವ ಅಧಿಕಾರಿಯೂ ಕೂಡ ಇದುವರೆಗೆ ಸರ್ಕಾರಕ್ಕೆ ರಿಪೋರ್ಟ್ ಮಾಡಿಲ್ಲ. ಏನಾದರೂ ದೂರುಗಳಿದ್ದರೂ ಕೂಡ ಅವನ್ನೂ ಸಹ ಅವರು ರಿಪೋರ್ಟ್ ಮಾಡಬೇಕು. ಮತ್ತು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಮನೋಭಾವನೆಯೂ ಕೂಡ ಅನೇಕ ಜನ ಅಧಿ ಕಾರಿಗಳಿಗೆ ಇಲ್ಲ. ಎಷ್ಟೋ ಜನ ಅಧಿಕಾರಿಗಳು ಈ ಕಡೆಗೆ ಗಮನ ಕೊಡುತ್ತಾ ಇಲ್ಲ. ಕಾಫಿ ಪ್ಲಾಂಟೇಷನ್ ವಿಚಾರವಾಗಿ ತೆಗೆದುಕೊಂಡು ಹೇಳುವುದಾದರೆ ಹಿಂದೆ ನೂರಾರು ಎಕರೆ ಕಾಫಿ ತೋಟಗಳಿಗೆ ತೆಗೆದುಕೊಂಡು ನಾಟ ಮಾರಾಟ ಮಾಡಿದ್ದರೂ ಆ ಕಾಲದಲ್ಲಿ ಅವರವರೇ ಎಷ್ಟೋ ಜನರು ಮಾರಿಕೊಂಡಿದ್ದಾರೆ. ಆದರ ಬಗ್ಗೆ ರಿಪೋರ್ಟ್ ಏನೂ ಇಲ್ಲ. ಆದೇ ರೀತಿ ಹರಿಜನರಿ ಗೋಸ್ಕರ ಈ ಕಾನೂನು ಇದೆಯೆಂದು ಬೇರೆ ಹೇಳುತ್ತೀರಿ. ಹರಿಜನರಿಗೆ ಕೊಟ್ಟಿರುವ ಒಂದೆರಡು ಎಕರೆಗಳನ್ನು ಮತ್ತು ಪೊಲಿಟಿಕಲ್ ಸಫರರ್ಸ್‌ಗೆ ಕೊಟ್ಟಿರತಕ್ಕ ಒಂದೆರಡು ಎಕರೆಗಳನ್ನು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರ ಸೀಲ್ ಹಾಕಿಸಿಕೊಂಡು ಜಮೀನು ಪಡೆದು ಮಾರಿರತಕ್ಕ ಜನರು ಈಗ ಬೇಕಾದಷ್ಟು ಇದ್ದಾರೆ. ಸರ್ಕಾರದವರಲ್ಲಿ ಅಂತಹ ರಿಪೋರ್ಟ್‌ಗಳು ಎಷ್ಟಿವೆಯೆಂದು ಕೇಳಿದರೆ, ಅದು ಈಗ ಸಿಗುವುದೇ ಇಲ್ಲ, ಅಧಿಕಾರಿಗಳಾದವರು ತಮ್ಮ ಕಾನೂನು ಪ್ರಕಾರ ಈ

ರಿಪೋರ್ಟ್‌ಗಳನ್ನು ನೇರವಾಗಿ ಆಗಿಂದಾಗ್ಗೆ ಸರ್ಕಾರಕ್ಕೆ ಕಳುಹಿಸದೇ ಇರುವುದೇ ಇದಕ್ಕೆ ಕಾರಣ. ಈ ರೀತಿ ತಪ್ಪು ಮಾಡಿರತಕ್ಕ ಅಧಿಕಾರಿಗಳ ಮೇಲೆ ಏನಾದರೂ ಸರ್ಕಾರದವರು ಕ್ರಮ ತೆಗೆದು ಕೊಂಡಿದ್ದಾರೆಯೇ ಅಂದರೆ, ಆದೇನೂ ಇಲ್ಲ. ಇನ್ನು ಬೇರೆ ಯಾವುದಾದರೂ ಸಾಮಾನ್ಯ ಕಾರ್ಯ ಗಳಲ್ಲಿ ತಪ್ಪು ಮಾಡಿದ್ದರೆ ಮಾತ್ರ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಮಾಡಿರತಕ್ಕ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೆ ಕೊಡಲಿಲ್ಲ, ಏಕೆ ಎಂಬುದಾಗಿ ಕೇಳಿದರೆ, ಅಧಿಕಾರಿಗಳಾದವರು ಆ ಕಡೆ ಗಮನವನ್ನೇ ಕೊಡುತ್ತಾ ಇಲ್ಲ. ಅಷ್ಟೇಮಟ್ಟಿಗೆ ಸರ್ಕಾರದವರು ಇರತಕ್ಕ ಕಾನೂನುಗಳನ್ನು ಈಗ ಸಡಿಲಮಾಡಿದ್ದಾರೆ. ಅದು ಸರಿಯಲ್ಲ. ಇನ್ನು ಮುಂದೆ ಇಲ್ಲ ಏನು ಕಾನೂನುಗಳನ್ನು ಪಾಸ್ ಮಾಡುತ್ತೇವೆಯೋ ಅವನ್ನು ಸಾಕಷ್ಟು ಜಾರಿಗೆ ಬರುವ ರೀತಿ ಯಲ್ಲಿ ನೂಕ್ಕ ಕ್ರಮವನ್ನು ತೆಗೆದುಕೊಳ್ಳುವುದು ಮಂತ್ರಿಗಳ ಆದ್ಯ ಕರ್ತವ್ಯ.

ಇನ್ನು ಲ್ಯಾಂಡ್ ಗ್ರಾಂಟ್ ಕೊಡುವ ವಿಷಯ. ಅದಕ್ಕಾಗಿ ತಾವು ಒಂದು ಕಮಿಟಿ ಮಾಡಿ ದ್ದೀರಿ. ಗ್ರಾಂಟ್ ಕೊಡುವುದು ಯಾರಿಗೆ ಪ್ರತ್ಯೇಕವಾಗಿ ಸಾಗುವಳಿ ಮಾಡುವುದಕ್ಕೆ ಶಕ್ತಿ ಇದೆಯೋ ಅಂತಹವರಿಗೆ ಅದನ್ನು ಕೊಡುವ ಅವಶ್ಯಕತೆ ಇಲ್ಲ. ಸ್ವಾಭಾವಿಕವಾಗಿ ಯಾರು ಲ್ಯಾಂಡ್ ಲೆಸ್ ಇರುತ್ತಾರೋ ಅಂತಹವರಿಗೆ ಅದನ್ನು ಕೊಡಬೇಕು. ಪ್ಲೇಟುಗಳ್ಲಿ ಇದ್ದುಕೊಂಡು ಅಲ್ಲಿ ಒಂದು ಬೀಡಿ ಅಂಗಡಿ ಇಟ್ಟುಕೊಂಡು ಇರುತ್ತಾರೋ ಅಂತಹವರಿಗೂ ಅದನ್ನು ಕೊಡಬೇಕೆಂದರೆ ಹೇಗೆ ? ಆದರೂ ತಮ್ಮ ಮೇಲೆ ಒಬ್ಬ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ಅವರು ಇದ್ದಾರೆ, ಹಿಂದೆ ಮಾಡಿದ್ದನ್ನು ಈಗ ಅದನ್ನು ರದ್ದು ಮಾಡಿದ್ದಾರೆ. 'ನಾನ್ ಅಫಿಷಿಯಲ್ ಕಮಿಟಿ ಎಂದು ಮಾಡಿ ಅಂತಹವರನ್ನು ಈಗ ಪ್ರತ್ಯೇಕವಾಗಿ ಮೇಲೆ ಇಟ್ಟಿದ್ದಾರೆ. ಕೆಲವು ಅಧಿಕಾರಿಗಳು ಇದರ ಬಗ್ಗೆ ಏನು ಮಾಡಿದರೂ ಕೂಡ ಅವನ್ನು ವಿಚಾರಣೆ ಮಾಡುತ್ತಾ ಇಲ್ಲ, ಒಂದು ವೇಳೆ ಅಧಿಕಾರಿ ಗಳಾದವರಿಗೆ ಸಂಬಂಧಪಟ್ಟ ರಿಕಾರ್ಡ್ಸ್‌ನಲ್ಲಿ ಇಷ್ಟವಿಲ್ಲದಿದ್ದರೆ ಪುಲ್‌ಸ್ಟಾಪ್‌ನಲ್ಲಿ ವ್ಯತ್ಯಾಸವಾಗಿದೆ ಎಂದು ಹಿಂದೆ ಮುಂದೆ ಹಾಕುವ ಪರ್ಯಾಸ ಬಂದು ಹೋಗಿದೆ. ರಿಕಾರ್ಡ್ಸ್ ಇನ್ನೂ ಬರಬೇಕೆಂದು ಕೊನೆಯಲ್ಲಿ ಅಧಿಕಾರಿಗಳಾದವರೂ ಹೇಳುವುದೂ ಉಂಟು. ಕೆಲವು ಕಡೆಗಳಲ್ಲಿ ತಹಸೀಲ್ದಾರರು ಕೆಲ ವೊಂದು ರಿಕಾರ್ಡ್ಸ್ ಬಗ್ಗೆ ಶಿಫಾರಸು ಆಗಿದೆ. ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆಂದು ಹೇಳಿ ದರೂ ಅವುಗಳನ್ನು ಇದುವರೆಗೂ ಎಫೆಕ್ಟಿಗೆ ಕೊಟ್ಟಿಲ್ಲ. ಸ್ಪೆಷಲ್ ಅಸಿಸ್ಟೆಂಟ್ ಕಮಿಷನರು ಹೋದ ತಿಂಗಳಲ್ಲಿ ಕೊಟ್ಟಂಥ ಆರ್ಜಿಗಳ ಬಗ್ಗೆ ಈ ತಿಂಗಳಲ್ಲಿ ತೀರ್ಮಾನವಾಗಿ ಅನೇಕರಿಗೆ ಸಾಗುವಳಿ ಚೀಟಿ ಗಳನ್ನು ಈ ತಿಂಗಳು ಕೊಟ್ಟಿದ್ದಾರೆ. ಇದರಿಂದ ಅನೇಕರು ತಮ್ಮ ಕೈಗೆ ಸಿಕ್ಕಿದ ಹಾಗೆ ತಂತಮ್ಮ ಜಮೀನುಗಳನ್ನು ಮಾರಿಕೊಂಡು ಹೋಗುತ್ತಿದ್ದಾರೆ. ಸಾಲ ತೀರಿಸುವುದಕ್ಕಾಗಿ ಈ ರೀತಿಮಾರು ತ್ತಿದ್ದಾರೆ. ಹೀಗೆ ಅನೇಕ ರೂಪಗಳಲ್ಲಿ ತೊಂದರೆಯಾಗಿದೆ.

ಇನ್ನು ಅನ್‌ಅಥರೈಜ್ಡ್ ಕಲ್ಟಿವೇಷನ್ ವಿಷಯ. 1968ರ ನಂತರ ಆದ ಬಗ್ಗೆ ಕಾನೂನು ರೀತಿ ಎವಿಕ್ಷನ್ ಆರ್ಡರ್ ಮಾಡದೆ ಶಿಫಾರಸು ಮಾಡಿದರೆ ಅಂಥಾ ಅಧಿಕಾರಿಗಳ ಮೇಲೆ ಏಕೆ ಆ ರೀತಿಯಾಗಿ ಶಿಫಾರಸುಮಾಡಲಾಯಿತೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಸರ್ಕಾರ ಪ್ರಶ್ನೆ ಮಾಡುವುದಿಲ್ಲ. 1970ನೇ ಇಸವಿಯಲ್ಲಿ ನಡೆದಂಥ ಒಂದು ಅಕ್ರಮ ಪ್ರವೇಶದ ಬಗ್ಗೆ ಇದುವರೆಗೂ ಯಾವ ಒಬ್ಬ ಅಧಿಕಾರಿಯೂ ಗಮನಿಸಿಲ್ಲ. ನಮ್ಮಲ್ಲಿ ಒಬ್ಬ ದೊಡ್ಡ ಸಾಹುಕಾರರು ಎಡಬಾಳು ಗ್ರಾಮದಲ್ಲಿದ್ದಾರೆ. ಅವರ ಜಮೀನು 71ನೇ ಸರ್ವೆ ನಂಬರದು. ಅವರು ಅಲ್ಲಿನ ವಿಲೇಜ್ ಅಕೌಂಟೆಂಟ್ ಅವರನ್ನು ತಮ್ಮ ಕೈಲಿ ಹಾಕಿಕೊಂಡು 1968ನೇ ಇಸವಿಯ ಹಿಂದಿನಿಂದಲೂ ಇತ್ತು ಸಾಗುವಳಿ ಎಂಬ ಸುಳ್ಳು ಲೆಕ್ಕ ಬರೆಸಿ ಸಾಗುವಳಿ ಜಮೀನನ್ನು ಅವರಿಗೆ ಶಿಫಾರಸು ಮಾಡಿಸಿದ್ದಾರೆ ತಾಸೀಲ್ದಾರರು. ಅದು ಅನ್ ಅಥರೈಜ್ಡ್ ಆಕ್ಯುಪೇಷನ್. ಆದರೆ ಮೊದಲು ಬೇಲಿ ಕಿತ್ತು ಹಾಕಿದರೆ ರಿಕಾರ್ಡ್ಸ್ ಕಳುಹಿಸುತ್ತೇನೆಂದು ಹೇಳುವ ತಾಕತ್ತು ಅಲ್ಲಿನ ಅಧಿಕಾರಿಗಳಿಗೆ ಇರಲಿಲ್ಲ. ಅದನ್ನು ಅಲ್ಲಿಯೇ ಇಟ್ಟುಕೊಂಡು ಬೇರೆ ರೀತಿಯಲ್ಲಿ ರಿಪೋರ್ಟ್ ಮಾಡುತ್ತಿದ್ದಾರೆ. ಆಂದಮೇಲೆ ಈಗಿನ ಕಾನೂನು ಎಲ್ಲಿ ಜಾರಿಗೆ ಬರುತ್ತದೆ ? ಮೊದಲು ಬೇಲಿ ಕಿತ್ತುಹಾಕು, ನಂತರ ದರಖಾಸ್ತು ಮಂಜೂರು ಮಾಡುವುದು ಬಿಡುವುದು ಎಂಬುದಾಗಿ ಆಗಿನ ಅಧಿಕಾರಿಗಳಾಗಿದ್ದವರು ಹೇಳಲೇ ಇಲ್ಲ. ಸಂಬಂಧಪಟ್ಟ ರಿಕಾರ್ಡ್ಸ್ ಮೇಲೆ ಒಂದು ಅಕ್ಷರ ಬರೆಯುವುದಿಲ್ಲವೆಂದು ಹೇಳಬೇಕಾಗಿತ್ತು, ನಾನು ನಂತರ ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರಿಗೆ ಹೇಳಿದೆ. ಅವರು ಸ್ಪೆಶಲ್ ಅಧಿಕಾರಿ ವರ್ಗ ಕಳುಹಿಸಿ 70 ಎಕರೆಗಳಷ್ಟು ಜಮೀನು ಇದೆ ಎಂತಾಯಿತು. ಅಂದ ಮೇಲೆ 45 ಎಕರೆಯೆಂದು ರಿವೆನ್ಯೂ ಸರ್ವೇಯಲ್ಲಿ ಪೋನ ಆಗಿರುವದು ತಿಳಿದ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ? ಅದನ್ನು ಕೇಳಿದರೂ ಇವತ್ತಿನವರೆಗೂ ಅವರ ಕಡೆಗೆ ಸರ್ಕಾರ ಗಮನ ಕೊಡುತ್ತಾ ಇಲ್ಲ. ಹೀಗೆ ಅನ್ ಅಥರೈಜ್ಡ್ ಕಲ್ಟಿವೇಶನ್ ಆಗುತ್ತಿದ್ದರೂ ಅಧಿಕಾರಿಗಳಾದವರು ದರಖಾಸ್ತುಗಳನ್ನು ಅನೇಕರಿಗೆ ಅದೇ ಜಮೀನನ್ನು ಶಿಫಾರಸ್ಸು ಮಾಡುತ್ತಿದ್ದಾರೆ. ಆದ್ದರಿಂದ

(ಶ್ರೀ ಕೆ. ಎನ್. ವೀರಪ್ಪಗೌಡ)

ಕಾನೂನುಗಳನ್ನು ಮಾಡುವಾಗ ಇಂಥಾದ್ದಕ್ಕೆ ನಿಜವಾಗಿ ಅವಕಾಶ ಕೊಡದಂತೆ ನೋಡಿಕೊಳ್ಳಬೇಕು. ಎಷ್ಟೋನಂದರ್ಭಗಳಲ್ಲಿ ಸಾಗುವಳಿಚೀಟಿಗಾಗಿ ಅಧಿಕಾರಿಗಳಾದವರು ಸರ್ಕಾರಕ್ಕೆ ಶಿಫಾರಸು ಮಾಡುವುದಕ್ಕೆ ಮುಂಚಿತವಾಗಿಯೇ ಇನ್ನೊಬ್ಬ ಸಾಗುವಳಿ ಮಾಡಿಕೊಂಡು ಇರುತ್ತಾನೆ. ಇವನಿಗೆ ಜಮೀನು ಸಿಗುವುದಿಲ್ಲ. ತಾವು 1968ನೇ ಇಸವಿಗೆ ಹಿಂದೆ ಈಗ್ಗೆ ನಾಲ್ಕು ವರ್ಷಗಳ ಹಿಂದಿನ ರಿಕಾರ್ಡ್ಸ್‌ಗಳನ್ನು ಮತ್ತು 1968ರ ನಂತರ ಆಗಿರತಕ್ಕ ಅನ್ ಆಥರೈಜ್ಡ್ ಕಲ್ಟಿವೇಷನ್ನುಗಳ ರಿಕಾರ್ಡ್ಸ್‌ಗಳನ್ನು ನೋಡಿದರೆ, ನೂರಕ್ಕೆ ನೂರರಷ್ಟು ಹಿಂದಿನ ತಾರೀಖೇ ಹಾಕಿರುವುದನ್ನು ಬರೆದಿರುವುದನ್ನು ನೋಡಬಹುದು. ನಾನು ನಮ್ಮಲ್ಲಿಗೆ ಬನ್ನಿ, ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ಬರೆದರೂ ಇದುವರೆಗೆ ನೀವು ಯಾರೂ ಬರಲಿಲ್ಲ. ಬೇಲೆ ಹಾಕಿಕೊಂಡು ಊರಿನವರು ಯಾರಾದರೂ ಸಾಗುವಳಿ ಚೀಟಿಗಾಗಿ ಅರ್ಜಿ ಕೊಟ್ಟರೆ, ರಿಕಾರ್ಡ್‌ಗಳನ್ನು ಬಿಲ್ಡಪ್ ಮಾಡುತ್ತಿದ್ದೀವೆಂದು ಹೇಳುತ್ತೀರಿ. ನೀವು ನಿಮ್ಮ ಕಾನೂನಿನಲ್ಲಿ ಅಂಥಾದ್ದಕ್ಕೆ ಅವಕಾಶ ಕೊಡುತ್ತಿದ್ದೀರಿ. ತಹಸೀಲ್ದಾರರು ಇವತ್ತು ಅದನ್ನು ಸರಿಮಾಡಿಸಬೇಕೆಂದು ಆರ್ಡರ್ ಕೊಟ್ಟಿದ್ದೀರಿ. ಸಾಗುವಳಿ ಚೀಟಿಗೆ ಅರ್ಜಿ ಕೊಡದೇ ಅನ್ ಆಥರೈಜ್ಡ್ ಸಾಗುವಳಿ ಮಾಡುವ ಮನುಷ್ಯನ ಮೇಲೆ ಏನು ಆಕ್ಷನ್ ಇಲ್ಲ. ಸರ್ಕಾರದವರು ಒಳ್ಳೆಯ ಕಾನೂನುಗಳನ್ನು ಮಾಡುತ್ತಾರೆಂದು ಪತ್ರಿಕೆಗಳಲ್ಲಿ ಹೇಳುತ್ತಾರೆ. ನಮ್ಮನ್ನು ಕೇಳಿದರೆ ನಾವು ಅಧಿಕಾರಿಗಳನ್ನು ಕೇಳಬೇಕೆಂದು ಹೇಳಬೇಕಾದ ಪ್ರಸಂಗ ಬರುತ್ತದೆ. ಆದ್ದರಿಂದ ಅನ್ ಆಥರೈಜ್ಡ್ ಕಲ್ಟಿವೇಷನ್ ಬಗ್ಗೆ ತಾವು ಹೆಚ್ಚಿಗೆ ಗಮನಕೊಡಬೇಕು. ಇಲ್ಲದಿದ್ದರೆ, ನಿಮ್ಮ ಕಾನೂನು ನಿಜವಾಗಿ ಜಾರಿಗೆ ಬರುವುದಿಲ್ಲ. ತಾವು ಇದರ ಬಗ್ಗೆ ಏನು ಕಾನೂನುಗಳನ್ನು ಮಾಡಿದ್ದೀರೋ ಅವು ಎಫೆಕ್ಟಿವ್ ಆಗಿ ಜಾರಿಗೆ ಬರುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ನಿಮ್ಮ ಇಂತಹ ಕಾನೂನುಗಳನ್ನು ಸರಿಯಾಗಿ ಜಾರಿಗೆ ತರದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇರೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆಗ ನಿಮ್ಮ ಆದಳಿತ ಚೆನ್ನಾಗಿದೆಯೆಂದು ಹೇಳಬಹುದು.

ಕೊನೆಯದಾಗಿ, ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕೆ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ ಜೈ ಹಿಂದ್.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಮಂತ್ರಿಯವರು ರ್ಯಾಂಟ್ ಗ್ರಾಂಟ್ ವಿಚಾರವಾಗಿ ಒಂದು ಬಿಲ್ಲನ್ನು ತಂದಿದ್ದಾರೆ. ತಂದಿರತಕ್ಕಂತಹ ಬಿಲ್ಲು ನಾಮ್‌ಕಾವಾಸ್ತೆ ಕಾನೂನು ಆಗಿ ಉಳಿಯಲಿ ಎಂದು ತಂದಿದ್ದಾರೋ, ಅಥವಾ ಜನರಿಗೆ ಏನಾದರೂ ಪ್ರಯೋಜನವಾಗಲಿ ಎಂದು ತಂದಿದ್ದಾರೋ ಎಂದು ಗೊತ್ತಾಗಿಲ್ಲ. ಇವತ್ತು ಜನರು ಇವರನ್ನು ಕೇಳಿದರೆ, ನೋಡಿ ನಾವು ಇಂತಿಂಥ ಬಿಲ್ಲುಗಳನ್ನು ತಂದು ಕಾನೂನು ಮಾಡುತ್ತೇವೆಂದು ಹೇಳಬಹುದಷ್ಟೆ. ಸಾಮಾನ್ಯವಾಗಿ ನನ್ನ ಅನುಭವದಲ್ಲಿ ಹೇಳುವುದಾದರೆ, ಸರ್ಕಾರದವರು ಇಲ್ಲಿಯವರೆಗೆ ಬಡ ಜನರಿಗೆ ಮತ್ತು ಹರಿಜನರಿಗೆ ಯಾವ್ಯಾವ ಭೂಮಿಯನ್ನು ಕೊಟ್ಟಿದ್ದಾರೋ, ಅವುಗಳು ಈಗ ಎಷ್ಟು ಜನರ ವಶದಲ್ಲಿವೆ ಎಂಬುದನ್ನು ನೋಡಿದರೆ, ಯಾರ ವಶದಲ್ಲಿಯೂ ಇಲ್ಲ. ಇವೊತ್ತಿನ ದಿವಸ ಎಷ್ಟು ಜನರಿಗೆ ಈ ರೀತಿ ಜಮೀನನ್ನು ಕೊಟ್ಟಿದ್ದಾರೆ ಮತ್ತು ಆದರಿಂದ ಎಷ್ಟು ಜನರು ಅದರ ಫಲವನ್ನು ಊಟ ಮಾಡಿದ್ದಾರೆಂಬುದನ್ನು ಮಾನ್ಯ ರವೆನ್ಯೂ ಮಂತ್ರಿಯವರು ಹೇಳಬೇಕು. ಇವತ್ತು ಇವರು ಏನೊಂದು ಬಿಲ್ಲನ್ನು ತರುತ್ತಿದ್ದಾರೆ, ಅದರಿಂದ ಇವರ ಸಮಾಜವಾದಕ್ಕೆ ದ್ರೋಹ ಮಾಡುತ್ತಾರೆಂದು ನಾನು ಹೇಳುತ್ತೇನೆ. ಇವೊತ್ತಿನ ದಿವಸ ಇವರು ಯಾವ ಬಡ ಜನರಿಗಾಗಿ ಭೂಮಿಯನ್ನು ಕೊಡುತ್ತಿದ್ದಾರೋ, ಅದು ಹಳ್ಳಿಯಲ್ಲಿರತಕ್ಕಂತಹ ಶ್ರೀಮಂತ ವರ್ಗದವರ ಕೈಸೇರುತ್ತದೆ. ಒಬ ಜನರು ಅವರಿಂದ ಸಾಲ ಸೋಲ ಮಾಡಿಕೊಂಡು ತಮ್ಮ ಜಮೀನನ್ನು ಶ್ರೀಮಂತರಿಗೆ ಬರೆದುಕೊಟ್ಟು ಬಿಚ್ಚಿರುತ್ತಾರೆ. ಅದೇ ರೀತಿ ಅನೇಕ ರಾಜಕೀಯ ನಂತ್ರಸ್ಥರು ಸರ್ಕಾರದಿಂದ ಜಮೀನನ್ನು ಪಡೆದಿರುತ್ತಾರೆ. ಇಂತಹ ಜನರು ಮಂತ್ರಿಗಳ ಮೇಲೆ ಮತ್ತು ಇತರ ಅಧಿಕಾರಿಗಳ ಮೇಲೆ ಪ್ರಭಾವವನ್ನು ಬೀರಿ ಜಮೀನನ್ನು ಪಡೆದುಕೊಂಡಿರುತ್ತಾರೆ. ಅಂಥ ಜನರ ಬಗ್ಗೆ ಒಂದು ನಿಷ್ಪಕ್ಷವಾದ ನಿಲುವನ್ನು ನಮ್ಮ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಮಾಡಿದರೆ ಮಾತ್ರ ನೀವು ಏನು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೀರಿ ಅದನ್ನು ಮಾಡಿದ ಹಾಗಾಗುತ್ತದೆ. ನಾನು ಇವತ್ತು ಸರ್ಕಾರವನ್ನು ಕೇಳುತ್ತಿದ್ದೇನೆ—ನೀವು ಜಮೀನನ್ನು ಹೇಗೆ ವಿತರಣೆ ಮಾಡುತ್ತಿದ್ದೀರಿ, ಎಂದು. ಕೆಲವು ಕಡೆ ಒಂದು ಜಮೀನನ್ನು ಸುಮಾರು ಎರಡು ಮೂರು ಜನರಿಗೆ ಕೊಟ್ಟುಬಿಟ್ಟು ಮಂಜೂರು ಚೀಟಿ

ಕೊಟ್ಟಿದ್ದಾರೆ. ಇದರಿಂದ ಎಷ್ಟು ಮಟ್ಟಿನ ದಕ್ಷತೆಯಿಂದ ನಿಮ್ಮ ಅಧಿಕಾರಿಗಳು ಕೆಲಸ ಮಾಡುತ್ತಾರೆಂಬುದನ್ನು ನೋಡಬಹುದು. ಇವತ್ತು ಬಡವರಿಗೆ ನೀವು ಭೂಮಿಯನ್ನು ಕೊಡುತ್ತಿದ್ದೀರಿ. ಆದರೆ ಅದನ್ನು ಉಳುಮೆ ಮಾಡುವವನು ಶ್ರೀಮಂತ. ಬಡವನಿಗೆ ಕೊಟ್ಟ ಭೂಮಿ ಅವನಿಗೆ ಸಿಗದ ಹಾಗೆ ಏನೇನು ಅನ್ಯಾಯದ ಕೆಲಸ ಕಾರ್ಯಗಳನ್ನು ಮಾಡಬೇಕೋ, ಅವುಗಳನ್ನು ಶ್ರೀಮಂತನು ಮಾಡುತ್ತಿದ್ದಾನೆ. ಹೀಗೆ ಮಾಡುವುದರಿಂದ ನ್ಯಾಯವಾಗಿ ಬಡವನಿಗೆ ಯಾವ ಭೂಮಿ ಸಿಗಬೇಕೋ, ಅದು ಸಿಗುತ್ತಾ ಇಲ್ಲ. ಇದರಿಂದ ಇಪ್ಪತ್ತಿನ ದಿವಸ ಬಡವರ ಶೋಷಣೆಯಾಗುತ್ತಿದೆ. ಅಂಥ ಶೋಷಣೆ ಮಾಡುತ್ತಿರುವವರ ಮೇಲೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತಿದ್ದಾರೆಂಬುದನ್ನು ನಾನು ಕೇಳುತ್ತೇನೆ. ಇದು ನಮ್ಮ ಸರ್ಕಾರದ ನೀತಿಯೇ ಎಂಬುದನ್ನು ನಾನು ಕೇಳುತ್ತೇನೆ. ಅದೇ ರೀತಿ ಇವತ್ತು ಪರಿಜನರಿಗೆ ಕೊಟ್ಟಿರತಕ್ಕಂತಹ ಭೂಮಿಯನ್ನು ಸಹ ಅಲ್ಲಿರತಕ್ಕಂತಹ ಪುಡಾರಿಗಳು ತೆಗೆದುಕೊಂಡು ಹಂಚಿಕೊಳ್ಳುತ್ತಿದ್ದಾರೆ. ಆದ್ದರಿಂದ ಇವುಗಳ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಕೇವಲ ಇಂತಹ ಬಿಲ್ಲುಗಳನ್ನು ತಾರಿಗೆ ತಂದರೆ ಅದರಿಂದ ಏನನ್ನೂ ಸಾಧನೆ ಮಾಡಿದಂತಾಗುವುದಿಲ್ಲವೆಂದು ಮಾತ್ರ ಹೇಳುತ್ತೇನೆ. ಉದಾಹರಣೆಗೆ ಇವರು ಮಾಡಿದಂತಹ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯ ವಿಚಾರದಲ್ಲಿಯೂ ಅನ್ಯಾಯ ನಡೆದಿದೆ. ನಾನು ಈ ಬಿಲ್ಲನ್ನು ಸ್ವಾಗತ ಮಾಡಿದರೂ, ಅಲ್ಲಿರತಕ್ಕಂತಹ ದೋಷಗಳನ್ನು ನಿರ್ಮೂಲ ಮಾಡಬೇಕೆಂದು ಹೇಳುತ್ತಿದ್ದೇನೆ. ನಾನಾದರೂ ಹೇಳುತ್ತೇನೆ, ಇದನ್ನು ರಿಜೊಸ್ಟೆಕ್ಟಿವ್ ಆಗಿ ತಾರಿಗೆ ಕೊಡಬೇಕು. ಯಾರ್ಯಾರು ಶ್ರೀಮಂತರು ಬಡವರ ಜಮೀನನ್ನು ಬರೆಸಿಕೊಂಡಿದ್ದಾರೋ, ಅಂಥವುಗಳನ್ನು ಕ್ಷಣ ಸರ್ಕಾರದ ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು. ಇನ್ನು ಕೆಲವು ಕಡೆ ಡೆಲ್ಟ್ ಏರಿಯದಲ್ಲಿ ಈಚಲು ಮರ ಇಲ್ಲದಿದ್ದರೂ ಲಂಚ ಕೊಟ್ಟು ಪಹಣಿಯಲ್ಲಿ ಇದೆ ಎಂದು ಬರೆಸಿರುತ್ತಾರೆ. ಅಂಥವುಗಳ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಂಡು ಜಮೀನನ್ನು ಬಡ ಜನರಿಗೆ ಮಂಜೂರು ಮಾಡಿ ಕೊಡಬೇಕೆಂದು ಹೇಳಿ, ಈ ಬಿಲ್ಲನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಸಭಾಧ್ಯಕ್ಷರೆ, ಈ ಮಸೂದೆಯ ಉದ್ದೇಶ ಶ್ಲಾಘನೀಯವಾದರೂ ಇದನ್ನು ಜಾರಿಗೆ ತರುವುದಕ್ಕಿಂತ ಮುಂಚೆ ಇದರಿಂದ ಆಗಬಹುದಾಂತಹ ಅನಾಹುತಗಳ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾದುದು ಬಹಳ ಅವಶ್ಯವೆಂದು ಕಾಣುತ್ತದೆ. ಸ್ವಾತಂತ್ರ್ಯ ಬಂದ ಮೇಲೆ ಭೂಮಿಯನ್ನು ಪಡೆದಿರತಕ್ಕಂತಹ ಒಂದು ಜಾತಿಯು ನಿರ್ಮಾಣವಾಯಿತು. ಆದರಲ್ಲಿ ಆ ಕೋಮಿನವರು, ಈ ಕೋಮಿನವರು ಎಂದು ಹೇಳುವುದು ಸರಿಯಲ್ಲ. ಇದರಲ್ಲಿ ಭೂಮಿಯನ್ನು ಪಡೆದು ಬೇರೆ ಕೆಲಸವನ್ನು ಮಾಡಿಕೊಂಡು ಪಟ್ಟಣದಲ್ಲಿ ವಾಸ ಮಾಡುತಕ್ಕ ಜನರೂ ಇದ್ದಾರೆ; ಮತ್ತು ರಾಜಕೀಯ ಜನರೂ ಇದ್ದಾರೆ. ಅಂಥ ಜನರಿಗೆ ಇದರಿಂದ ಹಾಸಿ ಹೊದಿಸಿ ಮಲಗಿಸಿದ ಹಾಗೆ ಆಗುತ್ತದೆ. ಇದರಿಂದ ಏನಾಗುತ್ತದೆ ಅಂದರೆ; ಹಣ್ಣು ತಿಂದವನು ನುಣಚಿಕೊಂಡ, ಸಿಪ್ಪೆ ತಿಂದವನು ಸಿಗಕಾಕಿಕೊಂಡ ಎನ್ನುವ ಗಾದೆಯ ಹಾಗೆ ಆಗುತ್ತದೆ. ಬಹಳ ಕಷ್ಟ ಪಟ್ಟು ಬೆವರು ನುರಿಸಿ ಈ ಪುಡಾರಿಗಳಿಂದ ಜಮೀನು ಕೊಂಡು ಕೊಂಡು ಅದರ ಮೇಲೆ ವಿಶೇಷ ಅಭಿವೃದ್ಧಿ ಮಾಡಿರುತ್ತಾರೆ. ಇಂಥ ಸಂದರ್ಭದಲ್ಲಿ ಈ ದಿವಸ ಈ ಮಸೂದೆಯನ್ನು ಮಾಡಿ ರಿಜೊಸ್ಟ್ಟಿವ್ ಆಗಿ ಎಫೆಕ್ಟ್ ಕೊಡುವುದಾದರೆ, ನಾಳೆಯ ದಿವಸ ಹಾಗೆ ಜಮೀನು ಕೊಂಡು ಕೊಂಡ ಜನರು ನಿರ್ಗತಿಕರಾಗುವುದಿಲ್ಲ. ಏನೂ ಸಂಶಯವಿಲ್ಲ. ನಾನು ರಾಜಕೀಯ ಸಂತ್ರಸ್ತರರು ಎಂದು ಏನು ಹೇಳುತ್ತೇವೆ, ಅಂಥವರು ಸರ್ಕಾರದಿಂದ ಅನೇಕ ದುರ್ಲಾಭಗಳನ್ನು ಪಡೆದಿರುತ್ತಾರೆ. ಅಂಥವರ ವಿಚಾರದಲ್ಲಿ ಏನು ಬೇಕಾದರೂ ಮಾಡಿ. ಆದರೆ ಕಷ್ಟ ಪಟ್ಟು ಸಂಪಾದನೆ ಮಾಡಿ, ಮನೆಯಲ್ಲಿರುವ ಒಡವೆಗಳನ್ನು ಗಿರವಿ ಇಟ್ಟು ಜಮೀನನ್ನು ಕೊಂಡುಕೊಂಡ ಜನರು ಅನೇಕರು ಇದ್ದಾರೆ. ಅಂಥವರಿಗೆ ನಿಮ್ಮ ಈ ಮಸೂದೆಯಿಂದ ದೊಡ್ಡ ಕೊಡಲಿ ಏಟು ಬಿದ್ದ ಹಾಗೆ ಆಗುತ್ತದೆ. ತಲ ತಲಾಂತರದಿಂದ ವ್ಯವಸಾಯವನ್ನೇ ನಂಬಿಕೊಂಡು ಜೀವನ ಮಾಡುತ್ತಿದ್ದ ಜನರಿಗೆ ನೀವು ದ್ರೋಹ ಮಾಡುತ್ತಿದ್ದೀರಿ ಎಂದು ನನಗೆ ಕಾಣುತ್ತದೆ. ಯಾರು ಸರ್ಕಾರದಲ್ಲಿ ಆಥವಾ ಅಧಿಕಾರಿಗಳ ಮೇಲೆ ತಮ್ಮ ಪ್ರಭಾವವನ್ನು ಉಪಯೋಗಿಸಿ ಜಮೀನನ್ನು ಪಡಕೊಂಡಿದ್ದಾರೋ, ಅಂಥವರನ್ನು ಕಂಡ ಹಿಡಿಯ ಶಿಕ್ಷೆ ಕೊಡಿ; ಆದರೆ ಯಾವ ನ್ಯಾಯವಾದ ಬೆಲೆ ಕೊಟ್ಟು ತಮ್ಮ ಕಷ್ಟ ಪಟ್ಟ ಸಂಪಾದನೆಯಿಂದ ಭೂಮಿಯನ್ನು ಕೊಂಡುಕೊಂಡಿದಾರೋ, ಅಂಥವರ ಬಗ್ಗೆ ಸರ್ಕಾರದವರು ನ್ಯಾಯವಾದ ರೀತಿಯಲ್ಲಿ ಪ್ಯಪಹರಿಸುವಂತೆ ಬದಲಾವಣೆ ಮಾಡಬೇಕೆಂದು ಕೇಳಿಕೊಂಡು, ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂಡೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲ ನೆಯದಾಗಿ ನಾನಾದರೂ ಹೇಳುತ್ತೇನೆ, ಈ ಭೂಮಿ ಎಂಬುದು ಒಂದು ಉತ್ಪಾದನಾ ಸಾಧನ. ಯಾರು ಅದರಲ್ಲಿ ಉತ್ಪತ್ತಿ ಮಾಡುತ್ತಾರೋ ಅವರಿಗೆ ಅದು ಸಲ್ಲಬೇಕು. ಆದ್ದರಿಂದ ಭೂಮಿ ಮಾರಾಟದ ವಸ್ತುವಲ್ಲವೆಂಬುದು ಮೂಲ ಭೂತವಾದ ವಿಷಯ ಉತ್ಪಾದಕರಿಗೆ ಕೈಯಲ್ಲಿ ಭೂಮಿ ಸಿಗಬಾರದು; ಇದು ನಮ್ಮ ವಿಚಾರ. ಇವತ್ತು ಭೂಮಿಯ ವಿತರಣೆಯನ್ನು ಯಾವ ತತ್ವದ ಆಧಾರದ ಮೇಲೆ ವಿತರಣೆ ಮಾಡುತ್ತಿದ್ದಾರೆಂಬುದನ್ನು ನೋಡಬೇಕು. ಈ ಭೂಮಿಯನ್ನು ಹೆಚ್ಚಿನವರು ಕಳೆದ 25 ವರ್ಷಗಳಿಂದೀಚೆಗೆ ಪಡೆದಿರುತ್ತಾರೆ. ಈ ಭೂಮಿಯನ್ನು ಲ್ಯಾಂಡ್ ಗ್ರಾಂಟ್ ಕಮಿಟಿಯವರು ಬಡವರಿಗೆ, ಹಿಂದುಳಿದ ವರ್ಗದವರಿಗೆ, ಹರಿಜನರಿಗೆ ಮತ್ತು ಗಿರಿಜನರಿಗೆ ಮತ್ತು ಯಾರು ಬೇಸಾಯವನ್ನು ನಂಬಿದ್ದಾರೆ ಮತ್ತು ಅದರಲ್ಲಿ ಜೀವನ ನಡೆಸುತ್ತಾರೆ ಅಂಥವರಿಗೆ ಕೊಡಬೇಕು.

ಸರ್ಕಾರ ಹಿಂದಿನಿಂದಲೂ ಆ ರೀತಿ ಕೊಟ್ಟುಕೊಂಡು ಬಂದಿದ್ದಾರೆ. ಆದ್ದರಿಂದ ಆ ಒಂದು ಕಲ್ಪನೆ ಇದೆ. ಭೂಮಿಯನ್ನೇ ನಂಬಿಲ್ಲದ ವ್ಯಾಪಾರಸ್ಥರು, ಸೆಕ್ರಟೇರಿಯಟ್ ಮುಂತಾದ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡತಕ್ಕ ಸರ್ಕಾರಿ ಅಧಿಕಾರಿಗಳು ಮತ್ತು ರಾಜಕೀಯ ಸಂತ್ರಸ್ತರು ಭೂಮಿಯನ್ನೇ ನಂಬಿ ಅದರಿಂದಲೇ ಬದುಕಿಕೊಂಡು ಬಂದಿಲ್ಲ. ಇದರಲ್ಲಿ ಬಿಳಿ ಅಂಗಿಯ ಜನಗಳಿಗೆ ಬಹುಪಾಲು ಭೂಮಿ ಸಿಕ್ಕಿದೆ. ಅವರ ಜೊತೆಯಲ್ಲಿ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿರತಕ್ಕ ಶ್ರೀಮಂತರು ಯಾರು ಯಾರು ಇದ್ದಾರೆ, ಬಂಡವಾಳ ಶಾಹಿಗಳು ಯಾರು ಯಾರು ಇದ್ದಾರೆ ಜಮೀನ್ದಾರರು ಅನುಕೂಲಸ್ಥರು ಯಾರು ಯಾರು ಇದ್ದಾರೆ ಅವರು ಇದುವರೆಗೂ ಯಾವ ನಿರ್ಗತಿಕರಿಗೆ ಸರ್ಕಾರದಿಂದ ಭೂಮಿಯನ್ನು ಕೊಡಲ್ಪಟ್ಟಿಕ್ಕೋ ಅಂಥವರಿಂದ ಆ ಭೂಮಿಯನ್ನು ನಾನಾ ರೀತಿಯಲ್ಲಿ ತಮ್ಮ ಮಕ್ಕಳ ಮತ್ತು ತಮ್ಮ ಸಂಬಂಧೀಕರ ಹೆಸರಿನಲ್ಲಿ ಬರೆಸಿಕೊಂಡಿರತಕ್ಕ ನಿದರ್ಶನಗಳು ನಾವಿರಾರು ವಿಕ ಲಕ್ಷಗಟ್ಟಲೆ ಇವೆ.

ಇನ್ನೊಂದು ಧಾರಣ ವಿಷಯವೇನೆಂದರೆ ಲ್ಯಾಂಡ್ ಗ್ರಾಂಟ್ ಕೋಡಿನ ಪ್ರಕಾರ ಈಗ ಹಂಚುವುದಕ್ಕೆ ಇರತಕ್ಕ ಭೂಮಿಯಲ್ಲಿ ಶೇಕಡಾ 50 ರಷ್ಟು ಭೂಮಿಯನ್ನು ಹರಿಜನರಿಗೆ ಮೊದಲು ಕೊಡಬೇಕೆಂದು ಇದೆ. ಆದರೆ ಇದರಲ್ಲಿ ಹುಡುಕಿದರೂ ಹರಿಜನರು ಸಿಕ್ಕುವುದಿಲ್ಲ. ಒಂದುವೇಳೆ ಹರಿಜನರು ಅರ್ಜಿಯನ್ನು ಹಾಕಿ ಭೂಮಿಯನ್ನು ಪಡೆದುಕೊಂಡಿದ್ದರೂ ಕೂಡ ಅದನ್ನು ಆ ಊರಿನ ಶ್ರೀಮಂತರೇ ಮಾತ್ರ ಆ ಹರಿಜನರಿಂದ ಬರೆಸಿಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಭೂಮಿಗಾಗಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹರಿಜನರಿಂದ ಒಂದು ಅರ್ಜಿಯೂ ಬಂದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ನಾನು ಹರಿಜನರಿಗೆ ಹೇಳಿ ಅರ್ಜಿಯನ್ನು ಹಾಕಿಸುತ್ತಿದ್ದೇನೆ. ಈಗ ಜನರು ಎಚ್ಚರವಾಗಿದ್ದಾರೆ ಆದರೂ ಸಹ ಇವೊತ್ತು ಸರ್ಕಾರ ಯಾರಿಗೆ ಭೂಮಿಯನ್ನು ಗ್ರಾಂಟ್ ಮಾಡಿದ್ದಾರೆ ಅದು ಅವರ ಕೈಯ್ಯಲ್ಲಿ ಇಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ಕೆಲವರು ಹೇಳಿದರು ಆ ರೀತಿ ಸರ್ಕಾರದವರು ಅವರಿಗೆ ಕೊಟ್ಟ ಭೂಮಿಯನ್ನು ರೂಢಿಸಿಕೊಳ್ಳಬಹುದಾದಂತಹ ಸವಲತ್ತೂ ಕೂಡ ಅವರಲ್ಲಿ ಇಲ್ಲ ಎಂದು. ಅವರು ಆರ್ಥಿಕವಾಗಿ ತೀರಾ ದುಸ್ಥಿತಿಯಲ್ಲಿದ್ದಾರೆ. ಯಾವುದೋ ಒಂದು ಕಷ್ಟ ಕಾಲದಲ್ಲಿ ಅವರು ಶ್ರೀಮಂತರಿಂದ 50-100 ರೂಪಾಯಿಗಳನ್ನು ತೆಗೆದುಕೊಂಡಿದ್ದರೆ ಅದಕ್ಕೆ ಅವರಿಂದ ಅವರ ಭೂಮಿಯನ್ನು ಬರೆಸಿಕೊಂಡಿದ್ದಾರೆ. ಹೀಗೆಲ್ಲಾ ಬಹಳ ಅನ್ಯಾಯಗಳು ಆಗಿವೆ, ಆ ಅನ್ಯಾಯಗಳನ್ನು ಪರಿಹಾರ ಮಾಡುವ ಉದ್ದೇಶದಿಂದ ಈ ಕಾನೂನನ್ನು ರಟಿಫಿಕೇಷನ್ನಿಗೆ ಬಂದ ಎಷ್ಟಕ್ಕಿಗೆ ಕೊಡಬೇಕು. ಕಳೆದ 15 ವರ್ಷಗಳಿಂದ ಈಚೆಗೆ ಸರ್ಕಾರದವರು ಯಾರಿಗೆ ಭೂಮಿಯನ್ನು ಕೊಟ್ಟಿದ್ದಾರೆ ಅವರ ಕೈಯಿಂದ ಬಿಡಿಸಿ ಯಾರು ಭೂಮಿಯನ್ನು ತೆಗೆದುಕೊಂಡಿದ್ದಾರೆ ಅವರಿಗೇ ಪುನಃ ಭೂಮಿಯನ್ನು ಕೊಡಬೇಕು. ಇಲ್ಲವೇ ಸರ್ಕಾರದವರೇ ಪುನಃ ಆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನು ಭೂ ಹೀನರೈತರಿಗೆ, ಕೃಷಿ ಕಾರ್ಮಿಕರಿಗೆ ಹಂಚಬೇಕು.

ಒಬ್ಬರು ಸದಸ್ಯರು.—ಅದಕ್ಕೆ ಗೇಣಿ ಕಾನೂನು ಅಡ್ಡಿ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದಕ್ಕೆ ಗೇಣಿ ಕಾನೂನು ಅಡ್ಡಿ ಬರುವುದಿಲ್ಲ. ಇದುವರೆಗೆ ಬೇಕಾದಷ್ಟು ಭೂಮಿ ಇರುವವರೇ ಆ ಭೂಮಿಯನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಸರ್ಕಾರ ಹಿಂದೆ ಯಾರಿಗೆ ಭೂಮಿಯನ್ನು ಗ್ರಾಂಟ್ ಮಾಡಿದ್ದಾರೆ, ಮುಂದೆ ಯಾರಿಗೆ ಗ್ರಾಂಟ್ ಮಾಡುತ್ತಾರೆ ಅವರಿಂದ ಯಾವ ಭೂಮಿಯನ್ನು ಪತೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಕಾನೂನಿನಲ್ಲಿ ಅಳವಡಿಸಬೇಕಾದ್ದು ಅವಶ್ಯಕ. ಆರ್ಥಿಕ ಅಶಕ್ತತೆಯಿಂದ ಕೆಲವರು ಭೂಮಿಯನ್ನು ಪರಭಾರೆ

ಮಾಡಿದ್ದಾರೆಂದು ಶ್ರೀಮಾನ್ ಕೆಂಚೇಗೌಡರು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆದರೆ ಅಶಕ್ತರಿಗೆ ಭೂಮಿಯನ್ನು ಕೊಡಲೇ ಬಾರದು ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ಯಾರೂ ಆ ವಾದವನ್ನು ಒಪ್ಪುವುದಿಲ್ಲ. ಬಡವರ ಬಗ್ಗೆ ಕಳಕಳಿಯಿರತಕ್ಕವರು ಯಾರೂ ಕೂಡ ಆ ಮಾತನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಇಡೀ ರಾಷ್ಟ್ರದಲ್ಲಿರತಕ್ಕ 55 ಕೋಟಿ ಜನರಲ್ಲಿ ಆರ್ಥಿಕ ಸಾಮರ್ಥ್ಯ ಇರತಕ್ಕದ್ದು ಕೇವಲ ಟಾಟಾ ಬಿರ್ಲಾಗಳ 75 ಕುಟುಂಬಗಳಿಗೆ ಮಾತ್ರ. ಹಾಗಾದರೆ 55 ಕೋಟಿ ಜನಗಳು ಬದುಕಬೇಕೋ ಬಾಳಬೇಕೋ ಅಥವಾ ಬೇಡವೋ ಎಂಬುದು ಇತ್ಯರ್ಥ ವಾಗಬೇಕು. ಈ ದೃಷ್ಟಿಯಿಂದ ಆರ್ಥಿಕವಾಗಿ ಹಿಂದುಳಿದವರಿಗೆ ಭೂಮಿಯನ್ನು ಕೊಡಬೇಕು. ಅವರು ಭೂಮಿಯನ್ನು ರೂಢಿಸಿಕೊಂಡು ಹೋಗುವುದಕ್ಕೆ ಕೂಡ ಸಾಕಷ್ಟು ಅನುಕೂಲವನ್ನು ಅವರಿಗೆ ಒದಗಿಸಿ ಕೊಡಬೇಕು. ಮತ್ತು ಭೂಮಿಯ ಹಂಚಿಕೆಯ ಬಗ್ಗೆ ಈಗ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಬೇರೆ ವಿಚಾರ ಇದೆ.

ಟಿ. ಟಿ. ಹಾಕಿರುವುದರ ಬಗ್ಗೆ ಶ್ರೀಮಾನ್ ಕೆ. ಎನ್. ವೀರಪ್ಪಗೌಡರು ಹೇಳಿದರು. ಬಹಳ ಶ್ರೀಮಂತರಾಗಿರುವವರು ಗುಡ್ಡಕ್ಕೇ ಬೇಲ ಹಾಕಿಕೊಂಡಿರುವವರು ಇದ್ದಾರೆ... ಅಂಥವರಿಂದ ಭೂಮಿಯನ್ನು ಬಿಡಿಸಿಕೊಳ್ಳಬೇಡಿ ಎಂದು ನಾನು ಹೇಳುವುದಿಲ್ಲ. ನಿಜವಾಗಿ ಬಡಬಗ್ಗರು ಯಾರು ಆ ಭೂಮಿಯನ್ನು ಸಾಗು ಮಾಡುತ್ತಿದ್ದಾರೆಯೋ ಅವರಿಗೇ ಅದನ್ನು ಕೊಟ್ಟರೆ ಅವರು ಅದನ್ನು ಪರಭಾರೆ ಮಾಡುವುದಿಲ್ಲ ಎಂದು ಅವರು ಭರವಸೆಯನ್ನು ಕೊಟ್ಟರೆ ಅವರಿಗೆ ಆ ಭೂಮಿಯನ್ನು ಕೊಡಿ. ಶರಾವತಿಯಲ್ಲಿ ಮುಳುಗಡೆಯಾದ ಜಮೀನಿನ ರೈತರಿಗೆ 12 ವರ್ಷಗಳಾದರೂ ಲ್ಯಾಂಡ್ ಗ್ರಾಂಟ್ ಮಾಡಿಲ್ಲ. ಅವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ. ಆದ್ದರಿಂದ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಇಂಥಾ ಕೇಸುಗಳ ಬಗ್ಗೆ ತಮ್ಮ ಗಮನವನ್ನು ಹರಿಸಬೇಕು. ಹಿಂದೆ ಯಾರಿಗೆ ಲ್ಯಾಂಡ್ ಗ್ರಾಂಟ್ ಆಗಿದೆ ಅವರಿಂದ ಆದು ಯಾರು ಯಾರಿಗೆ ಪರಭಾರೆಯಾಗಿದೆ ಅವರಿಂದ ಪುನಃ ಭೂಮಿಯನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಈ ಕಾನೂನನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟಿಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಭೂಮಿಯನ್ನು ಪರಭಾರೆ ಮಾಡುವುದನ್ನು ತಪ್ಪಿಸಿ ಯಾರಿಗೆ ಮೊದಲು ಸರ್ಕಾರದವರು ಭೂಮಿಯನ್ನು ಕೊಟ್ಟಿರುತ್ತಾರೆಯೋ ಅವರೇ ಅದರ ಫಸಲನ್ನು ತೆಗೆದುಕೊಳ್ಳಬೇಕು. ಅವರೇ ಆ ಭೂಮಿಯನ್ನು ಅನುಭವಿಸಿಕೊಂಡು ಬರಬೇಕು ಎನ್ನುವ ಒಂದು ತತ್ವವನ್ನು ಅಂಗೀಕಾರ ಮಾಡಬೇಕೆಂದು ಹೇಳಿ ಈ ಈ ನಭೆಯ ಮುಂದೆ ಸರ್ಕಾರದವರೇನು ಈ ಮಸೂದೆಯನ್ನು ತಂದಿದ್ದಾರೆ ಇದಕ್ಕೆ ನಾನು ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ನನ್ಮಾನ್ಯ ಅಧ್ಯಕ್ಷರೇ ಜನಪ್ರಿಯ ಕಂದಾಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಈ ಗೇಣಿದಾರರ ಗೇಣಿ ಬಾಕಿ ವಾವತಿ ಮಾಡುವ ಬಗ್ಗೆ ಪರಿಹಾರಕ್ಕೆ ಸಂಬಂಧಿಸಿದ ವಿಧೇಯಕವನ್ನು ನೋಡಿದರೆ ಅವರ ಪಕ್ಷದವರು, ಶ್ರೀಮಂತರು ಮತ್ತು ಇಂದಿರಾಗಾಂಧಿಯವರ ಏಜೆಂಟರು ಜನಪ್ರಿಯತೆ ಗಳಿಸಬೇಕೆಂದು ಬಹಳ ಚಿಂತನೆ ಮಾಡಿ ನಿಶಾರಾತ್ರಿಯಲ್ಲಿ ನಿರ್ಧಾರಕ್ಕೆ ಬಂದಹಾಗೆ ಇದೆ. ಉಳುವವನಿಗೆ ಭೂಮಿ; ಆಳುವವನಿಗೆ ಹೆಣ್ಣು ಕೊಡು ಎನ್ನುವ ಗಾದೆ ಜನಜನಿತವಾಗಿದೆ. ಅವರಂತೆ ನಮ್ಮ ಕಂದಾಯ ಸಚಿವರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಆಳುವವನಿಗೆ ಮಗಳು ಉಳುವವನಿಗೆ ಹೊಲ ಕೊಡುತ್ತೇವೆಂದು ರೆಚ್ಚೆ ಏರಿಸಿಕೊಂಡು ಈ ಬಿಲ್ಲನ್ನು ತಂದು ನಮ್ಮ ಮುಂದೆ ಇಟ್ಟಿದ್ದಾರೆ. ಇದು ಜೇನು ತುಪ್ಪ, ನಕ್ಕರೆ ಮತ್ತು ರನಬಾಳೆಹಣ್ಣು ಕಲಸಿದ ಹಾಗೆ ಇದೆ. ಇದನ್ನು ಸೂಕ್ಷ್ಮವಾಗಿ ಒಳಹೊಕ್ಕು ನೋಡಿದರೆ ಸಂಕಟ ವಾಗುತ್ತದೆ. ಇವರಿಗೆ ಯಾವ ಥಿಡಿ ಏಟು ಹೊಡೆಸಬೇಕೋ ಗೊತ್ತಿಲ್ಲ. ಇಂದಿರಾಗಾಂಧಿಯವರ ಏಜೆಂಟರು ಎಂದು ಏನು ಹೇಳುತ್ತಾರೆ ಅವರು ಬಡವರಿಗೆ ಭೂಮಿಯನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಪಟ್ಟ ದರಿದ್ರರು ನಾವು ಹೊಲ ಮಾಡುತ್ತೇವೆ ನಮಗೆ ಭೂಮಿ ಕೊಡಿ ಎಂದು ಲಕ್ಷಗಟ್ಟಲೆ ಜನ ಅರ್ಜಿ ಹಾಕುತ್ತಿದ್ದಾರೆ. ಹೀಗಿರುವಾಗ ನಮ್ಮಲ್ಲಿ ಇಷ್ಟು ಜಮೀನು ಇದೆ, ಇಷ್ಟು ಭೂಮಿಯನ್ನು ಉಳುವವರಿಗೆ ಕೊಡುತ್ತೇವೆ, ಆ ರೀತಿ ಸರ್ಕಾರದವರು ಕೊಟ್ಟಂತಹ ಭೂಮಿಯನ್ನು ಅವರು ವಂಶಪಾರಂಪರ್ಯವಾಗಿ ಇಟ್ಟುಕೊಳ್ಳಬೇಕು ಎಂದು ಹೇಳುವಂತಹ ಬಿಲ್ಲು ಇದು. ಇದು ತಮ್ಮ ಉದ್ದೇಶ. ಆದರೆ ಆಳುವವನಿಗೆ ಮಗಳನ್ನು ಕೊಟ್ಟು, ಆತನೇನಾದರು ಆಕೆಯನ್ನು ಬೇರೆಯವರಿಗೆ ಮತ್ತೆ ಬಾಡಿಗೆಗೆ ಕೊಟ್ಟರೆ ಕೇಳಲ್ಲೇ ಇರುವ ಜನರ ನೀವು. ಸರ್ಕಾರದವರು ಕೊಟ್ಟ ಜಮೀನನ್ನು ಅನೇಕರು ಪರಭಾರೆ ಮಾಡಿದ್ದಾರೆಂದು ತಿಳಿದೂ ಕೂಡ ತಾವು ಯಾವ ಎದೆಯ ಮೇಲೆ ಕೈಹಾಕಿಕೊಂಡು ಈ ಬಿಲ್‌ನ್ನು ತಂದಿದ್ದೀರೋ ನನಗೆ ಗೊತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಉಪಯೋಗಿಸುತ್ತಿರುವ ಭಾಷೆ ಕೆಳಮಟ್ಟದ ಭಾಷೆಯಾಗಿದೆ. ಈ ಸಭೆಯಲ್ಲಿ ಉಪಯೋಗಿಸಬಾರದಂಥ ಭಾಷೆಯನ್ನು ಉಪಯೋಗಿಸಿದ್ದಾರೆ. ಅದನ್ನು ತಾವು ಎಕ್ಸ್‌ಪಂಜ್ ಮಾಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಯಾರ ಮನಸ್ಸನ್ನೂ ನೋಯಿಸುವಂತಹ ಪದಗಳನ್ನು ಹೇಳಲಿಲ್ಲ.

Mr. DEPUTY SPEAKER.—It is our duty to maintain the dignity and decorum by having a dignified and sobre discussion. Therefore the Hon'ble Member may please not go back to those words and express his regret.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಯಾರ ಮನಸ್ಸನ್ನೂ ನೋಯಿಸುವಂಥ ಪದಗಳನ್ನು ಉಪಯೋಗಿಸಲಿಲ್ಲ. ಅದ್ದರಿಂದ ರಾಷ್ಟ್ರದ ಉದ್ಧಾರವಾಗಲೀ, ಬಡವರ ಉದ್ಧಾರವಾಗಲೀ ಆಗುತ್ತದೆ ಅಥವಾ ನನಗೆ ರಾಭವಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಅದ್ದರಿಂದ ಮಾನ್ಯ ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು ತಮ್ಮ ಮನಸ್ಸನ್ನು ನೋಯಿಸಿಕೊಳ್ಳಬಾರದೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸಭೆಯಲ್ಲಿ ಆಡ್ರೆಸ್ ಮಾಡುವಾಗ ಸನ್ಮಾನ್ಯ ನಟವರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರೇ ಎಂದು ಹೇಳಬೇಕು. ಮಾತನಾಡುವುದಕ್ಕೆ ಒಂದು ಮಿತ್ತ ಇರಬೇಕು. ಮತ್ತು ಒಂದು ಮಿತ್ತ ಇಟ್ಟುಕೊಂದು ಮಾತನಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳತಕ್ಕಂಥ ಮಾತುಗಳು ವ್ಯಕ್ತಿಗತ ಅನ್ವಯವಾಗದಿದ್ದರೂ, ಅವರು ಹೇಳುವ ಗಾದೆಯ ಅರ್ಥ ತೀರ ಕೆಳಮಟ್ಟದ್ದು ಆಗಿದೆ. ಈ ಸಭೆಯಲ್ಲಿ ಉಪಯೋಗಿಸಬಾರದಂಥ ಗಾದೆ ಆಗಿದೆ. ಆದ್ದರಿಂದ ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು ಅಥವಾ ಅದನ್ನು ಎಕ್ಸ್‌ಪಂಜ್ ಮಾಡಿಸಬೇಕು.

Mr. DEPUTY SPEAKER.—The Hon'ble Member may please think over and withdraw the words.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಆಡಬಾರದ ಮಾತನ್ನು ಆಡಲಿಲ್ಲ. ತಾವು ರೆಕಾರ್ಡ್ ತೆಗೆದು ನೋಡಬಹುದು. ಆದ್ದರಿಂದ ನಾನು ವಾಪಸ್ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕನ್ನಡದಲ್ಲಿ "ಷಂಡರಿಗೇಕೆ ಹೆಂಡರ ಚಿಂತೆ" ಎಂಬ ಗಾದೆ ಇದೆ I want to know whether it is parliamentary or unparliamentary ?

Mr. DEPUTY SPEAKER.—The Hon'ble Leader of Opposition cannot impose anything in my mouth and ask for a ruling. It should have some relevance to the subject before the House. Anyway I will just go through the expression used by Hon'ble Member Sri Puttaswamiah and if necessary I will expunge it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಎದುರುಪಕ್ಷದ ನಾಯಕರು ಆ ಗಾದೆಯನ್ನು ಈ ಸಭೆಯಲ್ಲಿ ಹೇಳುವುದು ಭೂಷಣವಲ್ಲ. ಅವರು ಹೇಳಿದಂಥ ಗಾದೆಯಲ್ಲಿ ಅನ್‌ಪಾರ್ಲಿಮೆಂಟರಿ ಶಬ್ದಗಳು ಇಲ್ಲದೆ ಇದ್ದರೂ ಉದ್ದೇಶಪೂರ್ವಕವಾಗಿ ಈ ಸಭೆಯಲ್ಲಿ ಗಾದೆಗಳನ್ನು ಹೇಳುವ ಮುಖಾಂತರ ಕೆಳಮಟ್ಟಕ್ಕೆ ಹೋಗುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ಮಾನ್ಯ ಎದುರು ಪಕ್ಷದ ನಾಯಕರು ಈ ಸಭೆಯ ಘನತೆಗಾಂಭೀರ್ಯವನ್ನು ಉಳಿಸಿಕೊಂಡು ಹೋಗುತ್ತಾರೆಂದು ತಿಳಿದಿದ್ದೆ. ಆದರೆ ಅವರೂ ಸಹ ಗಾದೆಗಳನ್ನು ಹೇಳಿ ಕೆಳಮಟ್ಟಕ್ಕೆ ಹೋಗಿದ್ದು ವಿಷಾದಕರ. ಅವರು ಹೇಳಿದಂಥ ಗಾದೆಯನ್ನು ಸಹ ಮಾನ್ಯ ಅಧ್ಯಕ್ಷರು ಎಕ್ಸ್‌ಪಂಜ್ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯ ಘನತೆಗಾಂಭೀರ್ಯಗಳನ್ನು ಉಳಿಸಿಕೊಂಡು ಹೋಗುವ ವಿಚಾರದಲ್ಲಿ ನಾನು ಶ್ರೀಮಾನ್ ಹುಚ್ಚಮಾಸ್ತಿಗೌಡರಿಂದ ಉಪದೇಶ ತೆಗೆದುಕೊಳ್ಳಬೇಕಾಗಿಲ್ಲ. ನಾನು ಈ ಸಭೆಗೆ ಹೊಸದಾಗಿ ಬಂದಿಲ್ಲ. ಕಳೆದ ಹತ್ತು ವರ್ಷಗಳಿಂದ ಈ ಸಭೆಯಲ್ಲಿ ಕೆಲಸ ಮಾಡಿದ್ದೇನೆ. ಈಗ ಆ ಕಡೆ ಇರತಕ್ಕಂಥ ಸದಸ್ಯರುಗಳು ಈ ಕಡೆ ಇದ್ದಾಗ ಏನೇನು

ಪದಗಳನ್ನು ಕೋಟ್ ಮಾಡಿ ಹೇಳಿದ್ದಾರೆಂಬುದು ರೆಕಾರ್ಡ್‌ನಲ್ಲಿ ಇದೆ ಬೇಕಾದರೆ ಹಿಂದಿನ ರೆಕಾರ್ಡ್‌ಗಳನ್ನೆಲ್ಲಾ ಸಭೆಯ ಮುಂದೆ ತಂದಿಡುತ್ತೇನೆ. ಈ ಸಭೆಯಲ್ಲಿ ಗಾದೆಯನ್ನು, ಉಪಯೋಗಿಸಿದರೆ ಅದು ಪಾರ್ಲಮೆಂಟರಿಯೇ ಅಥವಾ ಅನ್-ಪಾರ್ಲಮೆಂಟರಿಯೇ ಎಂದು ನಾನು ಮಾನ್ಯ ಅಧ್ಯಕ್ಷರನ್ನು ಕೇಳಿದೆನೇ ಹೊರತು ಈ ಸಭೆಯ ಘನತೆಗಾಂಭೀರ್ಯಗಳನ್ನು ಉಳಿಸಿಕೊಂಡು ಹೋಗುವುದರಲ್ಲಿ ಮತ್ತು ಸಭೆಯ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡುಹೋಗುವುದರಲ್ಲಿ ನಾನು ಯಾರಿಗಿಂತಲೂ ಹಿಂದೆ ಹೋಗುತ್ತಿಲ್ಲ. ಕೆಲವು ಗಾದೆಯ ಪದಗಳನ್ನು ಉಪಯೋಗ ಮಾಡಬಹುದೇ ಎಂದು ಮಾತ್ರ ನಾನು ಕೇಳಿದೆ.

ಶ್ರೀಮತಿ ದಮಯಂತಿ ಬೋರೇಗೌಡ.—ಹಿಂದೆ ನಡೆದಿರುವ ಕಾರ್ಯಕರಾಪಗಳ ವಿಷಯ ಈಗ ಬೇಡ. ಈಗ ಉಪಯೋಗಿಸಿರುವ ಗಾದೆ ಅನ್-ಪಾರ್ಲಮೆಂಟರಿಯಾಗುತ್ತದೆ.

Mr. DEPUTY SPEAKER.—So far as the words uttered by Hon'ble Member Sri Puttaswamiah are concerned I will just go through them. Since he has refused to withdraw the expression, if they are found to be unparliamentary I will expunge them. Then with regard to points raised by Hon'ble Member Sri Deve Gowda, many things might have been said in the past, but if some mistake has been committed in the past, it cannot be a precedent and it should not be justified.

Sri H. N. NANJE GOWDA.—Such unparliamentary words used in the past were expunged from the records.

Mr. DEPUTY SPEAKER.—The Hon'ble Leader of Opposition stated that there are words which are not expunged from records. I would urge upon all Hon'ble Members to maintain the dignity and decorum of the House.

Sri D. B. KALMANKAR.—My submission is that the words expressed by Hon'ble Leader of Opposition should also be expunged.

Mr. DEPUTY SPEAKER.—He merely wanted to know whether a particular proverb is parliamentary or not.

Sri D. B. KALMANKAR.—I want that proverb should also be expunged.

Mr. DEPUTY SPEAKER.—He has not said anything with reference to anybody or in any context.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾಡುವಂತಹ ಕೆಲಸವನ್ನೆಲ್ಲಾ ಮಾಡಿ, ಹೇಳಬಾರದಂಥದ್ದನ್ನು ಹೇಳಿ ಅದು ಪಾರ್ಲಮೆಂಟರಿಯೇ ಅಥವಾ ಅನ್-ಪಾರ್ಲಮೆಂಟರಿಯೇ ಎಂದು ತಮ್ಮನ್ನು ಕೇಳಿದರೆ, ಅದು ಈ ಸಭೆಯ ಗಮನಕ್ಕೆ ಬಂದಂತಾಗುವುದಿಲ್ಲವೇ ?

Sri D. B. KALMANKAR.—That expression should not be allowed.

Mr. DEPUTY SPEAKER.—The Hon'ble Minister for Revenue must know that I have already stated that the Hon'ble Leader of Opposition has not justified those words. He merely wanted to know whether a particular proverb is parliamentary or unparliamentary.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮಲ್ಲಿ ನಡೆಯುತ್ತಿರುವ ಕಾರ್ಯಕರಾಪಗಳನ್ನು ಇಲ್ಲಿ ಬರೆಯುತ್ತಾರೆ ಅಲ್ಲವೇ ? ಹಾಗಾದರೆ ಅವರು ಇಲ್ಲಿ ಹೇಳಿರುವುದು ಪಾರ್ಲಮೆಂಟರಿಯೇ, ಅಲ್ಲವೇ ಎನ್ನುವುದನ್ನು ಇಲ್ಲಿ ಬರೆದಿಲ್ಲವೇ ? ಇದನ್ನು ಬರೆದುಕೊಳ್ಳುತ್ತಿದ್ದಾರೆ.

Mr. DEPUTY SPEAKER.—I have already made it clear that his remarks are totally unwarranted and not justified.

Sri N. HUTCHAMASTHY GOWDA.—I want to know whether those words form part of the proceedings ?

Mr. DEPUTY SPEAKER.—I have already stated that the Hon'ble the Leader of the Opposition was not justified in making those remarks.

Sri D. B. KALMANKAR.—Sir, my submission is that he has said so many things which are not in keeping with the decorum of this House. You have already promised that you will look into it and see that that portion is expunged. Hon'ble Sri Deve Gowda quoted a proverb which is very indecent and therefore it should also be expunged. We have to set good precedents for the future. The standard of discussion must be very high.

(At this stage Sri Vatal Nagaraj stood up to speak)

Mr. DEPUTY SPEAKER.—The Hon'ble Member Sri Vatal Nagaraj was not here when the Hon'ble Leader of the Opposition said this. He knows nothing about it, so I will not allow him to confuse things. He will please resume his seat.

Sri C. M. ARUMUGAM.—What is that shouting that side ? Is that the way they should shout ?

Mr. DEPUTY SPEAKER.—The Hon'ble Minister for Revenue and Sri Kalmankar will please note that I have already said that the Hon'ble Leader of the Opposition was not justified in making such a proposition. So, it is clear that this is almost expunged. The very import and the vigour of it has almost been cut down. Is it not sufficient ?. I have condemned it at the outset.

ಶ್ರೀ ಡಿ. ಕೆ. ನಾಯಕರ್.—ಮಾನ್ಯ ಸದಸ್ಯರು ಮಾತನಾಡುವಾಗ ಒಂದು ಗಾದೆಯನ್ನು ಇಲ್ಲಿ ಹೇಳಿದರು. ಮತ್ತು ಅದನ್ನು ಯಾವ ಅರ್ಥದಲ್ಲಿ ಹೇಳಿದರು ಅದನ್ನು ಸಮರ್ಥನೆ ಮಾಡುವ ರೀತಿಯಲ್ಲಿ ಹೇಳಿದ್ದಾರೆ.

Mr. DEPUTY SPEAKER.—I have already told him that he was not justified at all.

ಶ್ರೀ ಡಿ. ಕೆ. ನಾಯಕರ್.—ಮಾನ್ಯ ಅಧ್ಯಕ್ಷರು ಅದನ್ನು ಎಕ್ಸ್‌ಪಂಜ್ ಮಾಡದೆ ಇದ್ದರೆ ಅದನ್ನು ಒಪ್ಪಿಕೊಂಡಂತೆ ಆಗುವುದಿಲ್ಲವೇ ?

(interruptions)

Mr. DEPUTY SPEAKER.—The Hon'ble Members should not confuse the issue. I will consider if I should expunge the words of both the Hon'ble Members.

Sri C. M. ARUMUGAM.—You were kind enough to observe that Sri Vatal Nagaraj should not confuse the issue. Again when Sri Deve Gowda stood up you were good enough to say that the issue should not be confused. That means that it is your opinion

that whenever the members of the Opposition want to speak they intend to confuse the issue. We are very sorry.

Mr. DEPUTY SPEAKER.—I never meant that.

Sri C. M. ARUMUGAM.—We are here to obey your rulings. We, on this side, are the first persons to obey your rulings. But my submission is that it is not fair for the Chair to say that the Leader of the Opposition is causing confusion whenever he wishes to say something.

Mr. DEPUTY SPEAKER.—I never meant it. You are attributing to me, certain things, which I never said. Sri Deve Gowda put in a proposition and there was a little confusion. When we were just trying to settle the matter, I really felt that the Hon'ble the Leader of the Opposition should not further complicate the matter. In that context only I said so. Please do not take it otherwise.

Sri D. B. KALMANKAR.—Sir, I rise on a Point of Order. The Hon'ble Member Sri Arumugam is making an imputation.

Sri C. M. ARUMUGAM.—What is that imputation he is talking about?

Sri D. B. KALMANKAR.—The Hon'ble Member Sri Arumugam came in suddenly and without hearing what had happened is saying something.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ಪುಟ್ಟಸ್ವಾಮಯ್ಯನವರು ಆಡಿರುವ ಮಾತುಗಳಲ್ಲಿ ಕೆಲವನ್ನು ತೆಗೆಯಬೇಕು ಎಂದು ಹೇಳುವಾಗ ಯಾವ ಭಾಗವನ್ನು ತೆಗೆಯಬೇಕು, ಯಾವ ಪದಗಳನ್ನು ತೆಗೆದು ಹಾಕಬೇಕೆಂದು ಇದುವರೆಗೂ ಹೇಳಲ್ಲಿಲ್ಲ. ಮಾನ್ಯ ಸದಸ್ಯರು ಉಪಯೋಗಿಸಿರುವ ಯಾವಪದಗಳು ಅನ್‌ಪಾರ್ಲಮೆಂಟರಿ, ಯಾವ ಪದಗಳನ್ನು ತೆಗೆದು ಹಾಕಬೇಕು ಎಂದು ಹೇಳದೆ ಸುಮ್ಮನೆ ಗೊಂದಲ ಮಾಡಿದರೆ ಪ್ರಯೋಜನವೇನು?

Mr. DEPUTY SPEAKER.—I do not take objection for you being serious on this matter; but I request you not to be over-serious. ಎಕ್ಸೈಟಿನ್ ಮಾಡೋಣ ಎಂದು ನಾನು ಹೇಳಿದ್ದೇನೆ. Shri Kalmankar has said certain things about the imputations. I have never said that that the hon. Member has imputed anything against me.

ಶ್ರೀ ಎಚ್. ಡಿ. ದೇವೇ ಗೌಡ.—ಶ್ರೀಮಾನ್, ಪುಟ್ಟಸ್ವಾಮಯ್ಯನವರ ಭಾಷಣದ ಬಗ್ಗೆ ರೆವೆನ್ಯೂ ಮಂತ್ರಿಗಳು ಕೆಲವು ಆಕ್ಷೇಪಣೆಗಳನ್ನು ಎತ್ತಿದರು. ಈ ಸಭೆಯ ಕಾರ್ಯಕಲಾಪಗಳು ಒಂದು ಮಿತಿಗೊಳಪಟ್ಟಿಲ್ಲ, ಘನತೆ ಮತ್ತು ಗಾಂಭೀರ್ಯತೆಯ ಬಗ್ಗೆ ಸ್ವಲ ಎಚ್ಚರಿಕೆಯಿಂದಿರುವಂತೆ ಮಾನ್ಯ ಸದಸ್ಯರಿಗೆ ಸೂಚನೆಯನ್ನು ಕೊಡುವುದು ಒಳ್ಳೆಯದು ಎಂದು ಹೇಳಿದರು. ನಾನು ಕ್ಲಾರಿಫಿಕೇಷನ್ ಕೇಳಿದೆ, ಮತ್ತೆ ಆ ಪದಗಳನ್ನು ಪ್ರಯೋಗ ಮಾಡುತ್ತೇನೆ.

ಉಪಾಧ್ಯಕ್ಷರು.—ಅದನ್ನೆಲ್ಲ ಹೇಳಬೇಡಿ.

Sri H. D. DEVE GOWDA.—Nothing doing; I have got every right to say and I will persist in saying (Pandemonium).....

I have got every right to demand a ruling from the Chair. Even now I am prepared to stand by what I have said.

Mr. DEPUTY SPEAKER.—If you insist for my ruling, I shall certainly give a ruling. Please do not repeat those words which would complicate the issue.

ಶ್ರೀ ಪಾಟೀಲ್ ನಾಗರಾಜ್.—ಈಗ ಮಾನ್ಯ ಪುಟ್ಟಸ್ವಾಮಯ್ಯನವರು ಏನು ಹೇಳಿದ್ದಾರೆ ಎನ್ನುವುದು ತಮಗೆ ಅರ್ಥವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಭಾಷಣ ಮಾಡುವಾಗ ಯಾವುದಾದರೂ ಉಪಮಾನ ಉಪಮೇಯ ಕೊಡುವುದು ಸಂಪ್ರದಾಯ. ಮಾನ್ಯ ಪುಟ್ಟಸ್ವಾಮಯ್ಯನವರ ಭಾಷಣದಲ್ಲಿ ಅವರು ಏನು ಹೇಳಿದರು, ಅದರ ಅರ್ಥವೇನು ಎನ್ನುವುದನ್ನು ಮಂತ್ರಿಗಳು ಹೇಳಬೇಕು. ಅವರು ಏನೇನು ಪದಗಳನ್ನು ಹೇಳಿದರೋ ಅವುಗಳ ಅರ್ಥವೇನು ಎನ್ನುವುದನ್ನು ಹೇಳಬೇಕು. ಸುಮ್ಮನೆ ಆಕಾಶ ಕಳಚಿ ಬೀಳುತ್ತದೆ ಎನ್ನುವಂತೆ ಹೇಳುವುದರಲ್ಲಿ ಅರ್ಥವಿಲ್ಲ.

Mr. DEPUTY SPEAKER.—That is why I said that I shall examine them.

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಸದಸ್ಯರು ಉಪಯೋಗ ಮಾಡಿರುವುದರಲ್ಲ ತೀರ ಕೆಟ್ಟ ಪದಗಳಿವೆಯೇ ; ಆ ಪದಗಳ ಪ್ರಯೋಗದಿಂದ ಈ ಸದನಕ್ಕೆ ಆಗಿರುವ ಅಗೌರವವೇನು, ಆ ಪದಗಳಿಂದ ತಲೆ ಹೋಗತಕ್ಕದ್ದು ಎನಿದೆ ಅದನ್ನು ತಾವು ನೋಡಿ ಅರ್ಥವನ್ನು ಹೇಳಬೇಕು. ಸುಮ್ಮನೆ ಎಕ್ಸ್‌ಪಂಜ್ ಮಾಡುತ್ತೇನೆಂದು ಹೇಳಿದರೆ ಏನು ಪ್ರಯೋಜನ ?

Mr. DEPUTY SPEAKER.—I have never said that ಎಕ್ಸಾಮಿನ್ ಮಾಡಿ ನೋಡುತ್ತೇನೆ, ಅವಶ್ಯಕತೆ ಇದ್ದರೆ ಎಕ್ಸ್‌ಪಂಜ್ ಮಾಡಬೇಕಾಗುತ್ತದೆ ಎಂದು ಹೇಳಿದ್ದೇನೆ. At that time I was engaged in writing a small chit to Hon'ble Member Sri Kagodu Thimmappa. If necessary I shall examine and see whether those words could be expunged.

An HON'BLE MEMBER.—I request you to please examine whether the words uttered by Sri Puttaswamiah have to be expunged or not.

Sri H. D. DEVE GOWDA.—With due respect to the Chair. ಪಂಡರ ಕೈಯಲ್ಲ ಅಧಿಕಾರ ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ; ಪಂಡರಿಗೆ ಏಕೆ ಅಧಿಕಾರ ಹೋದು ಮುಂತಾ ಆ ಕತೆ ಕುಳಿತಿರತಕ್ಕ ಸದಸ್ಯರು ಎದುರು ಪಕ್ಷದಲ್ಲಿ ಇದ್ದಾಗ ಈ ಮನೆಯಲ್ಲಿ ಪದಗಳನ್ನು ಉಪಯೋಗಿಸಿರುವುದು ಪ್ರೊಸೀಡಿಂಗ್ಸ್‌ನಲ್ಲಿದೆ.

It is for the Chair to give a ruling either to expunge it or to allow it to go into the proceedings. It is for the chair to decide.

Sri H. N. NANJEGOWDA.—I raise a point of order. My point of order is based upon Rule 288, sub-rule (vii) of the Rules of Procedure and Conduct of Business in the Legislative Assembly. According to this rule, certain words which are seditious or defamatory, should not be used. The member while speaking shall not utter treasonable, seditious or defamatory words. Therefore when certain Hon'ble Members use such words, they may be called to order. Again the Hon'ble Leader of the Opposition has got up and has used the same words. My point of order is that those words are not as per the rules and that they are not in keeping with the dignity of the House and they are also not parliamentary. He is purposely reiterating those words which are not in keeping with the dignity of the House. It is not as if these words are uttered at random.

Mr. DEPUTY SPEAKER.—The rule quoted by the Hon'ble Minister Sri Nanjegowda, is very well known.

Sri V. N. PATIL.—We have spent 15 minutes on this question.

Mr. DEPUTY SPEAKER.—I have understood what the Hon'ble Member has in his mind. Sri Devegowda has raised a question of law. Therefore I am bound to answer him.

Sri V. N. PATIL.—There is no justification in uttering those words; but where is the necessity for provoking it hundred and one times?

Mr. DEPUTY SPEAKER.—Mr. Devegowda has further asked for a ruling from the Chair. I request the Hon'ble Leader of the Opposition kindly to point out to me the proceedings with page and the volume Number by about 1 P.M. tomorrow and afterwards I shall certainly give a ruling.

The House will now stand adjourned to meet again tomorrow at 1 P.M.

The House adjourned at Six of the clock to meet again at One of the clock on Thursday the 30th November 1972.